# PRESENT BOARD OF DIRECTORS



L. V. Nagarajan, IAS
Chairman & Principal Secretary,
Finance Department,
Government of Karnataka
(from 25.03.2010)
ಎಲ್.ವಿ. ನಾಗರಾಜನ್, ಐ.ಎ.ಎಸ್.,
ಅಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
(25.03.2010 ರಿಂದ)



Ajay Seth, IAS
Director & Secretary (B&R)
Finance Department,
Government of Karnataka
ಅಜಯ ಶೇಠ್, ಐ.ಎ.ಎಸ್.,
ನಿರ್ದೇಶಕರು ಮತ್ತು ಸಕಾರದ
ಕಾರ್ಯದರ್ಶಿಗಳು (ಬಿ. ಮತ್ತು ಆರ್),
ಆರ್ಥಿಕ ಇಲಾಖೆ



Aravind Jannu, IAS
Director & Excise Commissioner in
Karnataka
(from 02.06.2010)
ಅರವಿಂದ ಜನ್ನು, ಐ.ಎ.ಎಸ್.,
ಕರ್ನಾಟಕದ ಅಬಕಾರಿ ಆಯುಕ್ತರು
(02.06.2010 ರಿಂದ)



Dr. H. Shashidhar, IAS
Managing Director
ಡಾ. ಹೆಚ್. ಶಶಿಧರ್, ಐ.ಎ.ಎಸ್.,
ವ್ಯವಸ್ಥಾಪಕ ನಿರ್ದೇಶಕರು

# FORMER BOARD OF DIRECTORS



M. R. Sreenivasa Murthy, IAS
Chairman (upto 23.03.2010)
ಎಂ.ಆರ್. ಶ್ರೀನಿವಾಸ ಮೂರ್ತಿ, ಐ.ಎ.ಎಸ್.,
ಅಧ್ಯಕ್ಷರು (23.03.10 ರವರೆಗೆ)



Yogendra Tripathi, IAS
Director (upto 01.06.2010)
ಯೋಗೇಂದ್ರ ತ್ರಿಪಾಠಿ, ಐ.ಎ.ಎಸ್.,
ನಿರ್ದೇಶಕರು (01.06.10 ರವರೆಗೆ)

## ಲೆಕ್ಕ ಪರಿಶೋಧಕರು

**ಮೆ.ವಿ.ಕೆ. ನಿರಂಜನ್ ಅಂಡ್ ಕಂಪನಿ**
ಚಾರ್ಟರ್ಡ್ ಅಕೌಂಟೆಂಟ್ಸ್
ಬೆಂಗಳೂರು.

ನಿಗಮದ ಕಾರ್ಯದರ್ಶಿ ಹಾಗೂ
ಪ್ರಧಾನ ವ್ಯವಸ್ಥಾಪಕರು (ಹಣಕಾಸು)

**ಬಿ.ಬಿ. ಬಿರಾದಾರ**

## ನೋಂದಾಯಿತ ಕಛೇರಿ

ಸೀತಾಲಕ್ಷ್ಮಿ ಟವರ್ಸ್,
ನಂ. 78, ಮಿಷನ್ ರಸ್ತೆ,
ಬೆಂಗಳೂರು – 560 027.

## ಬ್ಯಾಂಕುಗಳು

1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
2. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
3. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
4. ಆ್ಯಕ್ಸಿಸ್ ಬ್ಯಾಂಕ್
5. ಐಎನ್‌ಜಿ ವೈಶ್ಯ ಬ್ಯಾಂಕ್
6. ಸಿಂಡಿಕೇಟ್ ಬ್ಯಾಂಕ್
7. ಐಸಿಐಸಿಐ ಬ್ಯಾಂಕ್
8. ಐಡಿಬಿಐ ಬ್ಯಾಂಕ್
9. ಕೆನರಾ ಬ್ಯಾಂಕ್
10. ಹೆಚ್‌ಡಿಎಫ್‌ಸಿ ಬ್ಯಾಂಕ್
11. ಕಾರ್ಪೊರೇಷನ್ ಬ್ಯಾಂಕ್
12. ಬ್ಯಾಂಕ್ ಆಫ್ ಬರೋಡಾ
13. ಬ್ಯಾಂಕ್ ಆಫ್ ಇಂಡಿಯಾ
14. ಇಂಡಿಯನ್ ಬ್ಯಾಂಕ್
15. ಯೂನಿಯನ್ ಬ್ಯಾಂಕ್
16. ವಿಜಯಾ ಬ್ಯಾಂಕ್
17. ಬ್ಯಾಂಕ್ ಆಫ್ ಮಹಾರಾಷ್ಟ್ರ


| ಕ್ರ. ಸಂ. | ಪರಿವಿಡಿ | ಪುಟ |
|---|---|---|
| 1 | ಸೂಚನಾ ಪತ್ರ | 01 |
| 2 | ನಿರ್ದೇಶಕರ ವರದಿ | 03 |
| 3 | ನಿರ್ದೇಶಕರ ವರದಿಗೆ ಅನುಬಂಧ | 11 |
| 4 | ಭಾರತದ ಕಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್ ರವರ ಟಿಪ್ಪಣಿ | 16 |
| 5 | ಲೆಕ್ಕ ಪರಿಶೋಧಕರ ವರದಿ | 17 |
| 6 | ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ | 19 |
| 7 | ಅಂಕಿ ಅಂಶಗಳ ನೋಟ | 22 |
| 8 | ಸ್ಥಿತಿ ವಿವರಣಾ ಪಟ್ಟಿ | 24 |
| 9 | ಲಾಭ ಮತ್ತು ಹಾನಿ ತ:ಖ್ತೆ | 26 |
| 10 | ನಗದು ಚಲಾವಣಾ ಪಟ್ಟಿ | 28 |
| 11 | ಅನುಸೂಚಿಗಳು | 30 |
| 12 | ಸ್ಥಿತಿ ವಿವರಣಾ ಪಟ್ಟಿ ಸಾರಾಂಶ ಮತ್ತು ಸಾಮಾನ್ಯ ವ್ಯವಹಾರದ ವಿವರಗಳು | 56 |

ಸೂಚನಾ ಪತ್ರ

# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

ನಂ 78, ಸೀತಾಲಕ್ಷ್ಮಿ ಟವರ್ಸ್, ಮಿಷನ್ ರಸ್ತೆ, ಬೆಂಗಳೂರು – 560 027

ನಂ.ಸಿಎಸ್‌ಎಲ್3–047

## ಸೂಚನಾ ಪತ್ರ

ನಿಗಮದ ಸದಸ್ಯರ 7ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸಲು ನೀಡಲಾಗಿರುವ ಸೂಚನಾ ಪತ್ರ ವಿವರಗಳು ಕೆಳಗಿನಂತಿವೆ

| | |
|---|---|
| ದಿನ | ಶುಕ್ರವಾರ |
| ದಿನಾಂಕ | 06–08–2010 |
| ವೇಳೆ | 11.30 ಘಂಟೆಗೆ |
| ಸ್ಥಳ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಕೊಠಡಿ |

ಕೆಳಗಿನ ಕಲಾಪಗಳನ್ನು ನಡೆಸಲಾಗುವುದು:

### ಸಾಮಾನ್ಯ ವ್ಯವಹಾರ

1. ನಿರ್ದೇಶಕರ ವರದಿ, 31.03.2010 ರಲ್ಲಿರುವ ಲೆಕ್ಕಪರಿಶೋಧಿತ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ, ಆ ದಿನದಂದು ಕೊನೆಗೊಂಡ ಲೆಕ್ಕಪರಿಶೋಧಿತ ಲಾಭ ನಷ್ಟ ತಃಖ್ತೆ ಮತ್ತು ಲೆಕ್ಕ ಪರಿಶೋಧಕರ ವರದಿ, ಇವುಗಳನ್ನು ಅಂಗೀಕರಿಸುವುದು, ಅವಲೋಕಿಸುವುದು ಮತ್ತು ಅಳವಡಿಸಿಕೊಳ್ಳುವುದು.
2. ಲಾಭಾಂಶದ ಘೋಷಣೆ.

### ವಿಶೇಷ ವ್ಯವಹಾರಗಳು :

**ಕಲಮು 94ರನ್ವಯ ಮತ್ತು ಕಂಪನಿ ಕಾಯ್ದೆ 1956ರ ಎಲ್ಲ ಇತರ ನಿಯಮಗಳಿಗನುಗುಣವಾಗಿ, ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ (ನಿಗಮ) ಅಧಿಕೃತ ಬಂಡವಾಳವನ್ನು, ₹ 5,00,00,000/– ಗಳಿಂದ (ರೂಪಾಯಿ ಐದು ಕೋಟಿಗಳು ಮಾತ್ರ) (ಪ್ರತಿ ಷೇರಿನ ₹ 1,000/– ಗಳ ಮೌಲ್ಯದ 50,000 ಇಕ್ವಿಟಿ ಷೇರುಗಳು), ₹ 12,00,00,000/– (ರೂಪಾಯಿ ಹನ್ನೆರಡು ಕೋಟಿ ಗಳು ಮಾತ್ರ) (ಪ್ರತಿ ಷೇರಿನ₹ 1,000/– ಗಳ ಮೌಲ್ಯದ 1,20,000 ಇಕ್ವಿಟಿ ಷೇರುಗಳು) ಗಳಿಗೆ ಹೆಚ್ಚಿಸಲು, ಈಗ ನಿಗಮವು ಹೊಂದಿರುವ ಇಕ್ವಿಟಿ ಷೇರುಗಳೊಂದಿಗೆ ₹ 1,000/– ಮೌಲ್ಯದ 70,000 (ಎಪ್ಪತ್ತು ಸಾವಿರ ) ಹೆಚ್ಚುವರಿ ಇಕ್ವಿಟಿ ಷೇರುಗಳನ್ನು ಪಾರಿ ಪಸ್ಸು ಆಧಾರದ ಮೇಲೆ ಸೃಷ್ಟಿ ಮಾಡಲು ಠರಾಯಿಸಲಾಯಿತು.**

**ಮುಂದುವರೆದಂತೆ, ಕಲಮು 16 ರನ್ವಯ ಮತ್ತು ಕಂಪನಿ ಕಾಯ್ದೆ 1956 ರ ಇತರೆ ನಿಯಮಗಳನ್ವಯ, ನಿಗಮದ ಮೆಮೊರಂಡಮ್ ಆಫ್ ಅಸೋಸಿಯೇಶನದ ಕಂಡಿಕೆ – V ನ್ನು ತಿದ್ದುಪಡಿ ಮಾಡಿ, ಈ ಕೆಳಗಿನಂತೆ ಬದಲಾಯಿಸಲು ಠರಾಯಿಸಿದೆ :**

**"ಕಂಡಿಕೆ – 'V : ನಿಗಮದ ಅಧಿಕೃತ ಷೇರು ಬಂಡವಾಳವು, ₹ 12.00 ಕೋಟಿಗಳು (ಹನ್ನೆರಡು ಕೋಟಿ ರೂಪಾಯಿಗಳು ಅಂದರೆ' ₹ 1,000/– ಮೌಲ್ಯದ 1,20,000 ಇಕ್ವಿಟಿ ಷೇರು, ಇರುತ್ತದೆ."**

ಸ್ಥಳ : ಬೆಂಗಳೂರು
ದಿನಾಂಕ : 03.08.2010

ನಿರ್ದೇಶಕ ಮಂಡಳಿಯ ಆದೇಶಾನುಸಾರ

**ಬಿ. ಬಿ. ಬಿರಾದಾರ**
ಕಂಪನಿ ಕಾರ್ಯದರ್ಶಿ ಹಾಗೂ
ಪ್ರದಾನ ವ್ಯವಸ್ಥಾಪಕರು(ಹಣಕಾಸು)

ಇವರಿಗೆ:
1. ನಿಗಮದ ಸದಸ್ಯರುಗಳು
2. ಶಾಸನಬದ್ಧ ಲೆಕ್ಕ ಪರಿಶೋಧಕರು

ಸೂಚನೆ : 1. ಸಭೆಗೆ ಮತ ಚಲಾಯಿಸಲು ಹಕ್ಕುಳ್ಳ ಸದಸ್ಯರು ಅವರ ಬದಲಿಯಾಗಿ ಮತ ಚಲಾಯಿಸಲು ಮಾತ್ರ ಪ್ರತಿನಿಧಿಯನ್ನು(proxy) ನೇಮಿಸಬಹುದು. ಪ್ರತಿನಿಧಿಯಾಗಿ ನೇಮಕವಾಗುವ ವ್ಯಕ್ತಿ ನಿಗಮದ ಸದಸ್ಯರಾಗಿರಬೇಕಿಲ್ಲ.

2. ಕಂಪನಿ ಕಾಯ್ದೆ ಕಲಮು 619(2) ರ ಅಡಿಯಲ್ಲಿ, 31.03.2010ಕ್ಕೆ ಕೊನೆಗೊಳ್ಳುವ ವರ್ಷಕ್ಕೆ, ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾರವರು ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸುವುದು.

3. 2005ರ ಕಂಪನಿ ಕಾಯ್ದೆ ಕಲಮು 17(2) ರ ಅಡಿಯಲ್ಲಿ, ಷೇರುದಾರರಿಂದ ಅಲ್ಪಾವಧಿ ಸೂಚನೆಯ ಅಂಗೀಕಾರವನ್ನು ಪಡೆಯಲಾಗಿದೆ.

## ಕಂಪನಿ ಕಾಯ್ದೆ 1956 173(2)ರ ಅಡಿ ವಿವರಣಾತ್ಮಕ ತಃಖ್ತೆ

1. ನಿಗಮದ ಪ್ರಸ್ತುತ ಷೇರು ಬಂಡವಾಳ ಕೆಳಗಿನಂತಿದೆ

   ಎ) ಅಧಿಕೃತ ಷೇರು ಬಂಡವಾಳ
   (₹1000 ಮೌಲ್ಯದ ಒಟ್ಟು 50,000 ಇಕ್ವಿಟಿ ಷೇರುಗಳು) ₹5.00 ಕೋಟಿಗಳು

   ಬಿ) ಸಂಧಿತ ಷೇರು ಬಂಡವಾಳ
   (₹1000 ಮೌಲ್ಯದ ಒಟ್ಟು 20,000 ಇಕ್ವಿಟಿ ಷೇರುಗಳು) ₹2.00 ಕೋಟಿಗಳು

2. ಆದೇಶ ಸಂಖ್ಯೆ ಆಇ 92 INV 2009, ದಿನಾಂಕ 20.8.2009ರಲ್ಲಿ ಸರ್ಕಾರ ನಿಗಮಕ್ಕೆ ₹ 10.00 ಕೋಟಿಗಳನ್ನು ಷೇರು ಬಂಡವಾಳಕ್ಕಾಗಿ ಬಿಡುಗಡೆ ಮಾಡಿರುತ್ತದೆ.

3. ಕಂಪನಿ ಕಾಯ್ದೆ 1956 ಸೆಕ್ಷನ್ 94ರಲ್ಲಿ ತಿಳಿಸಿದಂತೆ, ನಿಯಮಿತ ಕಂಪನಿ ತನ್ನ ನಿಬಂಧನೆಗಳಲ್ಲಿ ಅವಕಾಶವಿದ್ದಲ್ಲಿ, ಮೆಮೊರಂಡಂನ ಷರತ್ತುಗಳನ್ನು ಬದಲಾಯಿಸಿ ಹೆಚ್ಚಿನ ಷೇರುಗಳನ್ನು ನೀಡಬಹುದು. ಈ ಸೆಕ್ಷನ್‌ನ ಮೇಲಿನ ಅಧಿಕಾರವನ್ನು ನಿಗಮವು ಸಾಮಾನ್ಯ ಸಭೆಗಳಲ್ಲಿ ಚಲಾಯಿಸಬಹುದು. ಮತ್ತು ಇದಕ್ಕೆ ನ್ಯಾಯಾಲಯದ ಒಪ್ಪಿಗೆ ಬೇಡ.

4. ನಿಗಮದ ಎ.ಒ.ಎ. ನ ಆರ್ಟಿಕಲ್ 1ರಲ್ಲಿ ಹೀಗೆ ತಿಳಿಸಲಾಗಿದೆ.

   "1. ಕಂಪನಿ ಕಾಯ್ದೆ 1956 ಷಡ್ಯೂಲ್ 1ರ ಕೋಷ್ಟಕ ಎ ನಲ್ಲಿ ತಿಳಿಸಿದಂತೆ, ಖಾಸಗಿ ಕಂಪನಿಗಳಿಗೆ ಅನ್ವಯವಾಗುವ ನಿಯಮವನ್ನು, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊರತುಪಡಿಸದಿದ್ದಲ್ಲಿ, ಅದೇ ನಿಯಮವು ಈ ನಿಗಮಕ್ಕೂ ಅನ್ವಯಿಸುತ್ತವೆ."

5. ಶಡ್ಯೂಲ್ 44(1)ರ ಕೋಷ್ಟಕ "ಎ" ಯ ಅಡಿ, ನಿಗಮ ಆಗಿಂದಾಗ್ಗೆ ಠರಾವಿನ ಮೂಲಕ ಷೇರು ಬಂಡವಾಳವನ್ನು ಹೆಚ್ಚಿಸಬಹುದು. ಅಂತಹ ಠರಾವಿನಲ್ಲಿ ಹೆಚ್ಚಿಸಿದ ಬಂಡವಾಳದ ಮೊತ್ತ ಮತ್ತು ಷೇರುಗಳ ಸಂಖ್ಯೆಯನ್ನು ನಮೂದಿಸಿರಬೇಕು.

6. ನಿಗಮದ ಎಂ.ಒ.ಎ.ನ ಕಲಮು–5 ರ ಪ್ರಕಾರ; ನಿಗಮದ ಅಧಿಕೃತ ಷೇರು ಬಂಡವಾಳ ರೂ.5.00 ಕೋಟಿಗಳು. ಮತ್ತು ಪ್ರತಿ ಷೇರಿನ ಮೌಲ್ಯ ₹1000 ದಂತೆ, 50,000 ಇಕ್ವಿಟಿ ಷೇರುಗಳು.

7. ₹ 10.00 ಕೋಟಿಗಳ ಮೌಲ್ಯದ ಷೇರುಗಳು, ಪ್ರತಿ ಷೇರಿನ ಮೌಲ್ಯ ₹ 1000 ದಂತೆ, 1,00,000 ಇಕ್ವಿಟಿ ಷೇರುಗಳ ಹಂಚಿಕೆಗೆ ಅನುಕೂಲ ಮಾಡಲು, ಈಗಿರುವ ₹ 5.00 ಕೋಟಿಗಳ ಅಧಿಕೃತ ಬಂಡವಾಳವನ್ನು ₹ 12.00 ಕೋಟಿಗಳಿಗೆ ಹೆಚ್ಚಿಸಬೇಕಾಗುತ್ತದೆ. ಸಾಮಾನ್ಯ ಠರಾವನ್ನು ಹೊರಡಿಸಿ ನಿಗಮದ ಸದಸ್ಯರುಗಳ ಒಪ್ಪಿಗೆ ಪಡೆದು ಎಂ.ಒ.ಎ.ನ ಕ್ಲಾಸ್ 5ನ್ನು ಬದಲಿಸಬೇಕಾಗುತ್ತದೆ.

8. ನಿರ್ದೇಶಕ ಮಂಡಳಿ ತನ್ನ 32ನೇ ಸಭೆಯಲ್ಲಿ, ಅಧಿಕೃತ ಬಂಡವಾಳವನ್ನು ಹೆಚ್ಚಿಸುವ ಬಗೆಗಿನ ಪ್ರಸ್ತಾಪವನ್ನು ಒಪ್ಪಿದ್ದು, ಅದಕ್ಕೆ ಬೇಕಾದ ತಿದ್ದುಪಡಿಯನ್ನು ಮಾಡಲು ಒಪ್ಪಿರುತ್ತದೆ.

9. ನಿಗಮದ ಬದಲಾದ ಎಂ.ಒ.ಎ.ನ ಕರಡನ್ನು ಅಧಿಕೃತ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪರೀಕ್ಷಿಸಲು ಲಭ್ಯವಿರುತ್ತದೆ.

10. ಠರಾವನ್ನು ಸದಸ್ಯರ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದೆ.

11. ಮೇಲೆ ತಿಳಿಸಿದ ಠರಾವಿನ ಬಗ್ಗೆ ಯಾವುದೇ ನಿರ್ದೇಶಕರು ಆಸಕ್ತಿ ಇರುವುದಿಲ್ಲ.

# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು

## ನಿರ್ದೇಶಕರ ವರದಿ 2009–10

1. 2009–10ರ ಸಾಲಿನ ನಿಗಮದ ಪರಿಶೋಧಿತ ಆರ್ಥಿಕ ತ:ಖ್ತೆಗಳೊಂದಿಗೆ, 7ನೇ ವಾರ್ಷಿಕ ವರದಿಯನ್ನು, ನಿಗಮದ ನಿರ್ದೇಶಕ ಮಂಡಳಿಯ ಪರವಾಗಿ ಮಂಡಿಸಲು ನಾನು ಹರ್ಷಿಸುತ್ತೇನೆ.

### 2. ವ್ಯವಹಾರದ ನಮೂನೆ

ನಿಗಮವು, ಕರ್ನಾಟಕ ರಾಜ್ಯದ ಮದ್ಯ ಮತ್ತು ಮದ್ಯಸಾರದ ನಿರ್ವಹಣೆಯ ಕಾರ್ಯದಲ್ಲಿ ಏಕೈಕವಾಗಿ ತೊಡಗಿದೆ. ಕರ್ನಾಟಕ ರಾಜ್ಯದ ಅಬಕಾರಿ ನೀತಿಯಡಿ, ಎಲ್ಲಾ ಉತ್ಪಾದಕರು/ಸರಬರಾಜುದಾರರು ರಾಜ್ಯದಲ್ಲಿ ಮದ್ಯ ಅಥವಾ ಬೀರ್ ಮಾರಲು ಇಚ್ಛಿಸುವ ಆಮದುದಾರರು, ಕರ್ನಾಟಕ ರಾಜ್ಯದಲ್ಲಿ ಉತ್ಪಾದಿಸಿದ್ದಾಗಲಿ ಅಥವಾ ಹೊರ ರಾಜ್ಯದಲ್ಲಿ ಉತ್ಪಾದಿಸಿದ್ದಾಗಲಿ, ನಿಗಮದ ಮೂಲಕವೇ ಪ್ರವಹನ–ವಾಗಬೇಕು. ಚಿಲ್ಲರೆ ವ್ಯಾಪಾರಸ್ಥರು ತಾವು ಕರ್ನಾಟಕ ರಾಜ್ಯದಲ್ಲಿ ಮರುಮಾರಾಟ ಮಾಡಬಯಸುವ ಮದ್ಯ ಹಾಗೂ ಬೀರ್‌ಗಳನ್ನು ನಿಗಮದಿಂದಲೇ ಖರೀದಿಸಬೇಕು.

### 3. ನಿಗಮದ ಕಾರ್ಯನಿರ್ವಹಣೆಯ ಪ್ರಮುಖ ಅಂಶಗಳು

ಪ್ರಸ್ತುತ ಸಾಲಿನಲ್ಲಿ ನಿಗಮವು ಬಹಳ ಎತ್ತರಕ್ಕೆ ಏರಿದ್ದು ಮಾರಾಟದಲ್ಲಿ, ಪ್ರಿವಿಲೆಜ್ ಶುಲ್ಕ ನೀಡುವಲ್ಲಿ, ಕಾರ್ಯಶೀಲ ಬಂಡವಾಳದ ಉತ್ತಮ ಅಳವಡಿಕೆಯಲ್ಲಾಗಲಿ, ಅಲ್ಪಾವಧಿ ಮತ್ತು ದೀರ್ಘಾವಧಿ ಹೆಚ್ಚುವರಿ ನಿಧಿಯ ಹೂಡಿಕೆಯಲ್ಲಾಗಲಿ ಹಲವಾರು ಮಾನದಂಡಗಳನ್ನು ನಿಗದಿಪಡಿಸಿದೆ. ಅದರ ಪ್ರಮುಖ ಅಂಶಗಳು ಕೆಳಗಿನಂತಿವೆ.

ಕೋಷ್ಟಕ – 1 ₹ ಕೋಟಿಗಳಲ್ಲಿ

| ಕ್ರಮ ಸಂಖ್ಯೆ | ವಿವರಗಳು | 2007–08 | 2008–09 | 2009–10 |
|---|---|---|---|---|
| ಅ. | ಇತರ ಆದಾಯ ಸಹಿತ ಮಾರಾಟದ ಒಟ್ಟು ಮೊತ್ತ | 6409.70 | 8266.90 | 9691.05 |
| ಆ. | ಕರ್ನಾಟಕ ಸರ್ಕಾರಕ್ಕೆ ನೀಡಿದ ಪ್ರಿವಿಲೆಜ್ ಶುಲ್ಕ | 345.38 | 479.64 | 570.14 |
| ಇ. | ನಿವ್ವಳ ಲಾಭ | 20.00 | 16.05 | 7.74 |
| ಈ. | ಲಾಭಾಂಶ (%) | 100 | 100 | 100 |
| ಉ. | ಮೀಸಲು ಮತ್ತು ಹೆಚ್ಚುವರಿ | 28.35 | 42.06 | 47.46 |
| ಊ. | ಸಂದಿತ ಷೇರು ಬಂಡವಾಳ | 2.00 | 2.00 | 2.00 |

### 4. ಷೇರು ಬಂಡವಾಳ

ಅಧಿಕೃತ ಹಾಗು ಸಂದಿತ ಷೇರು ಬಂಡವಾಳ ₹ 5.00 ಕೋಟಿಗಳು (ಪ್ರತಿ ಷೇರಿಗೆ ₹ 1000/– ದಂತೆ 50,000 ಈಕ್ವಿಟಿ ಷೇರುಗಳು) ಮತ್ತು ₹ 2.00 ಕೋಟಿಗಳು (ಪ್ರತಿ ಷೇರಿಗೆ ₹ 1000/– ದಂತೆ 20,000 ಈಕ್ವಿಟಿ ಷೇರುಗಳು) ಅನುಕ್ರಮದಲ್ಲಿ ಮುಂದುವರಿಯುತ್ತವೆ. ಕರ್ನಾಟಕ ಸರ್ಕಾರವು, ನಿಗಮದ ಷೇರು ಬಂಡವಾಳಕ್ಕೆ ತಮ್ಮ ಹೂಡಿಕೆಯಾಗಿ ₹ 10.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ಕಂಪನಿಗಳ ಕಾಯ್ದೆ, 1956 ರ ಅಡಿ ವಿದ್ಯುಕ್ತವಾಗಿ ಕ್ರಮವಹಿಸಿದ ನಂತರ ಷೇರುಗಳನ್ನು ವಿತರಿಸುತ್ತದೆ.

### 5. ಹಣಕಾಸು

ಈ ವರ್ಷದ ಕೊನೆಯಲ್ಲಿ, ನಿಗಮವು ಪಡೆದುಕೊಂಡ ಆದಾರಸಹಿತ ಸಾಲವು 'ಶೂನ್ಯ' (ಹಿಂದಿನ ವರ್ಷ ₹ 78.96 ಕೋಟಿಗಳು) ಆಗಿತ್ತು. ಕರ್ನಾಟಕ ಸರ್ಕಾರದಿಂದ ಪಡೆದ ನಿರಾಧಾರ ಸಾಲ ₹ 2.53 ಕೋಟಿಗಳು ಮುಂದುವರೆದಿದೆ.

### 6. ಮಾರಾಟದ ಒಟ್ಟು ವಹಿವಾಟು

2009–10ನೇ ಸಾಲಿನಲ್ಲಿ ನಮ್ಮ ನಿಗಮವು ₹ 9653.21 ಕೋಟಿಗಳ ಮಾರಾಟದ ವಹಿವಾಟು ಸಾಧಿಸಿದೆ. ಇದು ಹಿಂದಿನ ಸಾಲಿಗೆ ಹೋಲಿಸಿದರೆ ಶೇ. 17.31 ರಷ್ಟು ಹೆಚ್ಚಳವಾಗಿದೆ.

ಮಾರಾಟದ ವಹಿವಾಟು ಮತ್ತು ಇತರ ಆದಾಯ ₹ ಕೋಟಿಗಳಲ್ಲಿ




2008–09ಕ್ಕೆ ಹೋಲಿಸಿದಾಗ ಬೇರೆ ಬೇರೆ ಭಾಗಗಳಲ್ಲಿನ ಶೇಕಡಾವಾರು ಅಭಿವೃದ್ಧಿಯು ಹೀಗಿದೆ – ಐಎಂಎಲ್ ಶೇ.19.50, ಬೀರ್ ಶೇ.9 ಮತ್ತು ಮದ್ಯಸಾರ ಶೇ.10.20 ಗಳಾಗಿದ್ದು, ವಿವರಣಾತ್ಮಕವಾದ ಮಾರಾಟ ವಹಿವಾಟನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ಪ್ರಮಾಣ – ಕೋಟಿ ಕಾರ್ಟನ್ ಬಾಕ್ಸ್‌ಗಳಲಿ
ಮೌಲ್ಯ ₹ ಕೋಟಿಗಳಲ್ಲಿ

**ಕೋಷ್ಟಕ – 2**

| ಕ್ರಮ ಸಂಖ್ಯೆ | ವಿವರಗಳು | 2007-08 | | 2008-09 | | 2009-10 | |
|---|---|---|---|---|---|---|---|
| | | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ | ಪ್ರಮಾಣ | ಮೌಲ್ಯ |
| ಅ. | ಭಾರತ ತಯಾರಿತ ಮದ್ಯ (ಐ.ಎಂ.ಎಲ್.) | 3.25 | 4878 | 3.66 | 6428 | 3.90 | 7681.91 |
| ಆ. | ಬೀರ್ | 1.43 | 878 | 1.54 | 1071 | 1.42 | 1167.79 |
| ಇ. | ಮದ್ಯಸಾರ | 24.56 * | 624 | 25.65 * | 729 | 23.42* | 803.52 |
| | **ಒಟ್ಟು** | | **6380** | | **8228** | | **9653.22** |

* ಕೋಟಿ ಬಲ್ಕ್ ಲೀಟರ್‌ಗಳಲ್ಲಿ.

## 7. ಮದ್ಯ ವಿಭಾಗ

2009–10ನೇ ಸಾಲಿನ ಒಟ್ಟು ಮಾರಾಟ ವಹಿವಾಟಿನಲ್ಲಿ, ಶೇ. 80 ಭಾಗ ಭಾರತ ತಯಾರಿತ ಮದ್ಯ, ಶೇ. 12 ಭಾಗ ಬೀರ್ ಮತ್ತು ಶೇ.8 ಭಾಗ ಮದ್ಯಸಾರ ಆಗಿರುತ್ತದೆ. ಭಾರತ ತಯಾರಿತ ಮದ್ಯದ ಮಾರಾಟದ ವಿವರ ಹೀಗಿದೆ:

ಪ್ರಮಾಣ – ಕೋಟಿ ಕಾರ್ಟನ್ ಬಾಕ್ಸ್‌ಗಳಲಿ
ಮೌಲ್ಯ ₹ ಕೋಟಿಗಳಲ್ಲಿ

**ಕೋಷ್ಟಕ – 3**

| ವಿವರ | ಪ್ರಮಾಣ | ಮೌಲ್ಯ | % ಮೌಲ್ಯದಲ್ಲಿ |
|---|---|---|---|
| ವಿಸ್ಕಿ | 3.13 | 5921 | 77 |
| ರಮ್ | 0.34 | 708 | 9 |
| ಬ್ರಾಂಡಿ | 0.31 | 753 | 10 |
| ಜಿನ್, ವೊಡ್ಕ ಮತ್ತು ಇತರೆ | 0.12 | 300 | 4 |
| **ಒಟ್ಟು** | | **7682** | **100** |

**2009–10 ವರ್ಷದ ಭಾಗವಾರು ಮಾರಾಟ (%)**




ಮದ್ಯ ಮಾರಾಟದ ಒಟ್ಟು ಮೌಲ್ಯದಲ್ಲಿ, ಬೆಂಗಳೂರು ನಗರ ಜಿಲ್ಲೆಯ ಭಾಗ ಶೇ.25 ರಷ್ಟು. ಬೆಂಗಳೂರು ವಿಭಾಗದಲ್ಲಿ ಅಂದರೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳು ಸೇರಿ, ಶೇ.38 ರಷ್ಟು ಮದ್ಯ ಮಾರಾಟ ಆಗಿದೆ. ಗುಲ್ಬರ್ಗ ವಿಭಾಗದಲ್ಲಿ ಅಂದರೆ, ಬೀದರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳು ಸೇರಿ ಶೇ.8 ರಷ್ಟು ಮದ್ಯ ಮಾರಾಟ ವಹಿವಾಟು ಆಗಿದೆ.

**2009–10 ವರ್ಷದ ಭಾ.ತ.ಮ. ದ ಮಾರಾಟದ ಸಂಯೋಜನೆ(%)**




## 8. ಮದ್ಯಸಾರ ವಿಭಾಗ

ಪ್ರಸ್ತುತ ವರ್ಷದಲ್ಲಿ ಒಟ್ಟು 23.42 ಕೋಟಿ ಬಲ್ಕ್ ಲೀಟರ್‌ಗಳ ಪ್ರಮಾಣದ ಮದ್ಯಸಾರದ ವಹಿವಾಟು ₹ 803.52 ಕೋಟಿಗಳಾಗಿದೆ. ಇದರಲ್ಲಿ, ₹ 93.18 ಕೋಟಿಗಳ (ಕಳೆದ ವರ್ಷ ₹ 64.10 ಕೋಟಿಗಳು) ಮೌಲ್ಯದ 2.18 ಕೋಟಿ (ಕಳೆದ ವರ್ಷ 1.64 ಕೋಟಿ) ಬಲ್ಕ್ ಲೀಟರ್‌ಗಳು ಮದ್ಯಸಾರವನ್ನು ಆಮದು ಮಾಡಿಕೊಳ್ಳಲಾಗಿದೆ ಹಾಗೂ ₹ 124.62 ಕೋಟಿಗಳ (ಕಳೆದ ವರ್ಷ ₹ 141.44 ಕೋಟಿಗಳು) ಮೌಲ್ಯದ 3.68 ಕೋಟಿ ಲೀಟರ್ (ಕಳೆದ ವರ್ಷ 5.14 ಕೋಟಿ ಲೀಟರ್‌ಗಳು) ಮದ್ಯಸಾರವನ್ನು ರಫ್ತು ಮಾಡಲಾಗಿದೆ. ಐ.ಎಂ.ಎಲ್. ತಯಾರಿಕೆಗೆ ಹಾಗು ಇತರ ಉದ್ದೇಶಗಳಿಗಾಗಿ ಡಿಸ್ಟಿಲರಿಗಳು ಒಟ್ಟು 3.51 ಕೋಟಿ ಲೀಟರ್ (ಕಳೆದ ವರ್ಷ 4.11 ಕೋಟಿ ಲೀಟರ್‌ಗಳು) ಮದ್ಯಸಾರವನ್ನು ಬಳಸಿಕೊಂಡಿವೆ. ಐ.ಎಂ.ಎಲ್. ತಯಾರಿಕೆಗೆ ಹಾಗೂ ಇತರ ಉದ್ದೇಶಗಳಿಗಾಗಿ ಮಾರಾಟ ಮಾಡಲಾದ ಒಟ್ಟು ಮದ್ಯಸಾರದ ಪ್ರಮಾಣವು ಆಮದನ್ನು ಹೊರತುಪಡಿಸಿ, 21.21 ಕೋಟಿ ಲೀಟರ್‌ಗಳು. (ಕಳೆದ ವರ್ಷ 24.01 ಕೋಟಿ ಲೀಟರ್‌ಗಳು) ಆಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಅಳವಡಿಸಲಾಗಿರುವ ಉತ್ಪಾದನಾ ಸಾಮರ್ಥ್ಯದಲ್ಲಿ ಶೇ.37.66 ರಷ್ಟು (ಕಳೆದ ವರ್ಷ ಶೇ. 55.15 ರಷ್ಟು) ಸಾಮರ್ಥ್ಯವನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಉತ್ಪಾದನಾ ವಿವರಗಳು ತೋರಿಸುತ್ತವೆ. ಒಂದು ಮೆಟ್ರಿಕ್ ಟನ್ ಕಾಕಂಬಿಯಿಂದ (molasses) 266.83 ಬಲ್ಕ್ ಲೀಟರ್‌ಗಳ (ಕಳೆದ ವರ್ಷ 261.79 ಬಲ್ಕ್ ಲೀಟರ್‌ಗಳು), ಮದ್ಯಸಾರ ಇಳುವರಿ ಪಡೆದಿರುವುದನ್ನು ಬಳಕೆ ವಿವರಗಳು ಸೂಚಿಸುತ್ತವೆ.

## 9. ಹಣಕಾಸು ಫಲಿತಾಂಶ

ಪ್ರಸ್ತುತ 2009–10 ರ ಸಾಲಿನಲ್ಲಿ, ನಿಗಮವು ತೆರಿಗೆಗಿಂತ ಮೊದಲು ₹ 8.57 ಕೋಟಿಗಳ ಲಾಭ ಗಳಿಸಿದೆ. ತೆರಿಗೆ ಪಾವತಿಯ ನಂತರದ ಲಾಭ ₹ 7.74 ಕೋಟಿಗಳಾಗಿದೆ.

ಈ ವರ್ಷ ಹಾಗೂ ಹಿಂದಿನ 2 ವರ್ಷಗಳಲ್ಲಿ ನಿಗಮವು ಗಳಿಸಿದ ಲಾಭದ ವಿವರಗಳನ್ನು ಕೋಷ್ಟಕ–4 ನೀಡಲಾಗಿದೆ:

**ಕೋಷ್ಟಕ - 4** ₹ ಕೋಟಿಗಳಲ್ಲಿ

| ಕ್ರಮ ಸಂಖ್ಯೆ | ವಿವರಗಳು | 2007-08 | 2008-09 | 2009-10 |
|---|---|---|---|---|
| ಅ. | ತೆರಿಗೆ ಮುನ್ನಿನ ಲಾಭ | 30.86 | 17.57 | 8.57 |
| ಆ. | ತೆರಿಗೆ ಕಳೆಯುವುದು | 10.85 | 1.52 | 0.83 |
| ಇ. | ತೆರಿಗೆ ಪಾವತಿಯ ನಂತರದ ಲಾಭ | 20.00 | 16.05 | 7.74 |




## 10. ಮೀಸಲು ಮತ್ತು ಹೆಚ್ಚುವರಿ

ನಿಗಮವು ₹ 0.77 ಕೋಟಿಗಳನ್ನು ಸಾಮಾನ್ಯ ಮೀಸಲಿಗೆ ವರ್ಗಾವಣೆ ಮಾಡುವ ಪ್ರಸ್ತಾಪವಿದೆ. ದಿನಾಂಕ 31.03.2010 ರಲ್ಲಿದ್ದಂತೆ ಸಂಚಿತ ಮೀಸಲು ಮತ್ತು ಹೆಚ್ಚುವರಿ ನಿಧಿಯು ₹ 47.46 ಕೋಟಿಗಳೆಂದು ತಮಗೆ ತಿಳಿಸಲು ಇಚ್ಛಿಸುತ್ತೇನೆ. ಇದು ನಮ್ಮ ನಿಗಮದ ಬಂಡವಾಳಕ್ಕಿಂತ 24 ಪಟ್ಟು ಇದೆ.




## 11. ಮಹತ್ತರ ಸಾಧನೆಗಳು

ಪ್ರಸ್ತುತ ವರ್ಷದಲ್ಲಿನ ನಿಗಮದ ಸಾಧನೆಗಳು ಈ ಕೆಳಗಿನಂತಿವೆ.

i) ಸರ್ವಕಾಲಿಕ ಅಧಿಕ ಮೊತ್ತವಾದ ₹ 570.14 ಕೋಟಿಗಳನ್ನು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಪ್ರಿವಿಲೆಜ್ ಶುಲ್ಕವೆಂದು ಪಾವತಿಸಲಾಗಿದೆ.

ii) ಕಳೆದ ವರ್ಷಕ್ಕಿಂತ ಶೆ.17 ರಷ್ಟು ಹೆಚ್ಚಿನ ಮಾರಾಟ ವಹಿವಾಟು ನಡೆಸಿದ್ದಾಗ್ಯೂ, ಹಣಕಾಸು ವೆಚ್ಚವು ಶೇ.78ರಷ್ಟು ವೆಚ್ಚದಲ್ಲಿ ಇಳಿಕೆಯಾಗಿದೆ.




iii) 31.3.2009ರಲ್ಲಿ, ₹ 78.96 ಕೋಟಿಗಳಾಗಿದ್ದ ಭದ್ರತಾ ಸಾಲಗಳು ಪ್ರಸ್ತುತ ವರ್ಷದಲ್ಲಿ ಇರುವುದಿಲ್ಲ.

iv) ಚಿಲ್ಲರೆ ಸಾಲ ನೀಡುವಲ್ಲಿ ಶೇ.24 ರಷ್ಟು ಇಳಿಕೆಯಾಗಿದೆ.

v) ಸಾಲ ಮತ್ತು ಮುಂಗಡ ನೀಡುವಲ್ಲಿ ಶೇ.26ರಷ್ಟು ಇಳಿಕೆ.

vi) ಪ್ರಸ್ತುತ ಹೊಣೆಗಾರಿಕೆ ಮತ್ತು ಪ್ರಾವಿಜನಿಂಗ್ ಮಾಡುವಲ್ಲಿ ಕಳೆದ ವರ್ಷಕ್ಕಿಂತ ಶೇ.23 ರಷ್ಟು ಇಳಿಕೆ.

vii) ಮಾರಾಟ ವಹಿವಾಟಿನಲ್ಲಿ ಶೇ.17ರಷ್ಟು ಹೆಚ್ಚಿನ ಸಾಧನೆಯಾಗಿದ್ದರೂ, ಸಿಬ್ಬಂದಿಯ ವೆಚ್ಚ ಹಾಗೂ ಸಾಮಾನ್ಯ ಮತ್ತು ನಿರ್ವಹಣಾ ವೆಚ್ಚವು ಕಳೆದ ವರ್ಷದಷ್ಟೇ ಇರುತ್ತದೆ.

## 12. ಪಾರದರ್ಶಕತೆ ಮತ್ತು ಭದ್ರತೆ

ಪ್ರಸ್ತುತ ವರ್ಷದಲ್ಲಿ, ನಿಗಮವು ಹೆಚ್ಚುವರಿ ಹಣ ಹೂಡಿಕೆ ಮಾಡುವಲ್ಲಿ 'ಪಾರದರ್ಶಕ' ಹಾಗೂ 'ಹೂಡಿಕೆಯ ಭದ್ರತೆ' ಎಂಬ ಎರಡು ಹೊಸ ನಿಯಮಗಳನ್ನು ಅಳವಡಿಸಿಕೊಂಡಿದೆ. ಈ ನಿಯಮಗಳಿಂದಾಗಿ ನಿಗಮವು ಇತರ ಆದಾಯದಲ್ಲಿ ಶೇ.3 ರಷ್ಟು ಹೆಚ್ಚಿನ ಸಾಧನೆ ಮಾಡಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ

ಸ್ಥಿರ ಠೇವಣಿಗಳ ಬಡ್ಡಿ ದರದಲ್ಲಿ ಶೇ.39–49 ರಷ್ಟು ಹಾಗೂ ಮ್ಯೂಚುಯಲ್ ಫಂಡ್‌ಗಳ ಮೇಲಿನ ಡಿವಿಡೆಂಡ್ ಶೇ.49–57 ರಷ್ಟು ಇಳಿಕೆ ಆದಾಗ್ಯೂ ಸಹ, ನಿಗಮವು ಇತರ ಆದಾಯದಿಂದ ಅಂದರೆ, ಸ್ಥಿರ ಠೇವಣಿಗಳ ಬಡ್ಡಿ ಹಾಗೂ ಮ್ಯೂಚುಯಲ್ ಫಂಡ್‌ಗಳ ಮೇಲಿನ ಡಿವಿಡೆಂಡ್, ಶೇ.3 ರಷ್ಟು ಹೆಚ್ಚಿಗೆ ಗಳಿಸಿದೆ.

## 13. ಇತರೆ ಮೂಲಗಳಿಂದ ಆದಾಯ

ಸ್ಥಿರ ಠೇವಣಿ ಮತ್ತು ಮ್ಯೂಚುಯಲ್ ಫಂಡ್‌ಗಳಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಹೂಡಿಕೆಗಳಿಂದ ಬಂದ ಆದಾಯದ ವಿವರಗಳು ಈ ಕೆಳಗಿನಂತಿವೆ.

**ಕೋಷ್ಟಕ – 5** ₹ ಕೋಟಿಗಳಲ್ಲಿ

| ಕ್ರಮ ಸಂಖ್ಯೆ | ವಿವರಗಳು | 2009-10 | 2008-09 |
|---|---|---|---|
| 1. | ಸ್ಥಿರ ಠೇವಣಿ ಮತ್ತು ಮ್ಯೂಚುಯಲ್ ಫಂಡ್‌ಗಳಿಂದ ಬಂದ ಆದಾಯ – | | |
| | ಅ. ಸ್ಥಿರ ಠೇವಣಿ | 17.15 | 10.82 |
| | ಆ. ಮ್ಯೂಚುಯಲ್ ಫಂಡ್‌ನಿಂದ ಬಂದ ಲಾಭಾಂಶ | 7.17 | 12.85 |
| | ಒಟ್ಟು (1) | **24.32** | **23.67** |
| 2. | <u>ಇತರೆ ಮೂಲಗಳಿಂದ ಬಂದ ಆದಾಯ</u> | | |
| | ಅ. ವಿಳಂಬ ಶುಲ್ಕ | 4.70 | 7.14 |
| | ಆ. ಮುಂಗಡಗಳ ಮೇಲಿನ ಬಡ್ಡಿ | 6.98 | 6.75 |
| | ಇ. ಇತರೆ | 1.83 | 0.93 |
| | ಒಟ್ಟು (2) | **13.51** | **14.82** |
| | **ಒಟ್ಟು ಮೊತ್ತ(1) + (2)** | **37.83** | **38.49** |







## 14. ಲಾಭಾಂಶ

ಕಳೆದ ಹಣಕಾಸು ವರ್ಷ ಮಾಡಲಾದ ಶಿಫಾರಸ್ಸಿನಂತೆ, ಪ್ರಸ್ತುತ ವರ್ಷವೂ ಶೇ.100 ರಷ್ಟು ಲಾಭಾಂಶವನ್ನು ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.




## 15. ಮುಖ್ಯ ಅನುಪಾತ

ನಿಗಮವು ಸಾಧಿಸಿರುವ ಮುಖ್ಯ ಅನುಪಾತಗಳನ್ನು ಕೋಷ್ಟಕ–6 ರಲ್ಲಿ ಕೊಡಲಾಗಿದೆ.

**ಕೋಷ್ಟಕ – 6** ₹ ಕೋಟಿಗಳಲ್ಲಿ

| ಕ್ರಮ ಸಂಖ್ಯೆ | ವಿವರಗಳು | 2007-08 | 2008-09 | 2009-10 |
|---|---|---|---|---|
| ಅ. | ಸಿಬ್ಬಂದಿ ಖರ್ಚು : ಮಾರಾಟ ವಹಿವಾಟು | 0.28% | 0.26% | 0.28% |
| ಆ. | ಆರ್ಥಿಕ ವೆಚ್ಚ : ಮಾರಾಟ ವಹಿವಾಟು | 0.05% | 0.03% | 0.006% |
| ಇ. | ಸಾಮಾನ್ಯ ಹಾಗೂ ನಿರ್ವಹಣಾ ವೆಚ್ಚ : ಮಾರಾಟ ವಹಿವಾಟು | 0.24% | 0.20% | 0.198% |
| ಈ. | ಪ್ರತಿ ಷೇರಿನ ಗಳಿಕೆ (ರೂ.)* | 10002 | 8027 | 3870 |
| ಉ. | ಪ್ರತಿ ಷೇರಿನ ಪುಸ್ತಕ ಮೌಲ್ಯ (ರೂ.)* | 15000 | 22965 | 24729 |

* ಪ್ರತಿ ಷೇರಿನ ಮುಖ ಬೆಲೆ ₹ 1000/–.






ಹಿರಿಯ ಅಧಿಕಾರಿಗಳ ಸಹಕಾರ ಮತ್ತು ನಿರ್ದೇಶನ, ನಿಗಮದ ಸಿಬ್ಬಂದಿಯ ಸಹಭಾಗಿತ್ವ ಮತ್ತು ವ್ಯಾಪಾರಿ ಸಹಚರರ ಹಾರೈಕೆಯೇ ಕಾರಣವು.




## 16. ಬೊಕ್ಕಸಕ್ಕೆ ಕೊಡುಗೆ

ಪ್ರಸ್ತುತ ವರ್ಷ, ನಿಗಮವು ₹ 6452.27 ಕೋಟಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೀಡಿದ್ದು, ಈ ವಿವರ ಕೆಳಗಿನಂತಿದೆ.

**ಕೋಷ್ಟಕ – 7** ₹ ಕೋಟಿಗಳಲ್ಲಿ

| ಕ್ರಮ ಸಂಖ್ಯೆ | ವಿವರಗಳು | 2008-09 | 2009-10 |
|---|---|---|---|
| 1 | ಪ್ರಿವಿಲೇಜ್ ಶುಲ್ಕ | 479.64 | 570.14 |
| 2 | ಸಂಗ್ರಹಿಸಲಾದ ಸುಂಕ | 4883.17 | 5881.30 |
| 3 | ನಿಗಮದ ತೆರಿಗೆ/ಫ್ರಿಂಜ್ ಬೆನಿಫಿಟ್ ಟ್ಯಾಕ್ಸ್ | 1.52 | 0.83 |
| | ಒಟ್ಟು | **5364.33** | **6452.27** |


Depot Managers attending the training programme on communication skill




## 18. ಮಾನವ ಸಂಪನ್ಮೂಲ

31.03.10 ರಲ್ಲಿದ್ದಂತೆ ನಿಗಮದಲ್ಲಿ ಒಟ್ಟು 475 ಸಿಬ್ಬಂದಿ ಸಂಖ್ಯೆಯಿದ್ದು, ಇದರಲ್ಲಿ 428 ಉದ್ಯೋಗಿಗಳು ನಿಯೋಜನೆ ಮೇರೆಗೆ ಹಾಗೂ 47 ಉದ್ಯೋಗಿಗಳು ಗುತ್ತಿಗೆ ಆಧಾರದಲ್ಲಿ ಇದ್ದಾರೆ. ಇದರಲ್ಲಿ 73 ಅಧಿಕಾರಿ ವರ್ಗ ಹಾಗೂ 402 ಅಧಿಕಾರೇತರ ಸಿಬ್ಬಂದಿಗಳಿರುತ್ತಾರೆ.

## 17. ಮುಖ್ಯ ಮಂತ್ರಿಗಳ ರತ್ನಾ ಪ್ರಶಸ್ತಿ ಪುರಸ್ಕಾರ

ನಿಗಮವು 2009–10 ರ "ಮುಖ್ಯ ಮಂತ್ರಿಗಳ ರತ್ನಾ ಪ್ರಶಸ್ತಿ" ಯನ್ನು ಪಡೆದುಕೊಂಡಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ. ಈ ಪ್ರಶಸ್ತಿಯನ್ನು, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ: ಎಚ್. ಶಶಿಧರ ಅವರು 17.05.2010 ರಂದು, ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಿಂದ ಪಡೆದರು. ನಿಗಮವು ಈ ಪ್ರತಿಷ್ಠಿತ ಪ್ರಶಸ್ತಿ ಪಡೆಯಲು, ನಿರ್ದೇಶಕ ಮಂಡಳಿಯ ಹಾಗೂ ಕರ್ನಾಟಕ ಸರ್ಕಾರದ



## 19. ನಿಗಮ–ಸಿಬ್ಬಂದಿಗಳ ಸಂಬಂಧ

ನಿಗಮ–ಸಿಬ್ಬಂದಿಗಳ ನಡುವೆ ಶಾಂತರೀತಿಯ, ಸೌಜನ್ಯ ಹಾಗೂ ಸೌಹಾರ್ದಯುತ ಸಂಬಂಧವು ಮುಂದುವರೆದಿದೆ ಎಂಬುದನ್ನು ತಿಳಿಸಲು ಹರ್ಷವಾಗುತ್ತದೆ.

## 20. ತರಬೇತಿ

2009–10 ರ ಸಾಲಿನಲ್ಲಿ ನಿಗಮವು ಸಿಬ್ಬಂದಿಯ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿರುತ್ತದೆ. ನಿಗಮವು 121 ಮಾನವ ದಿವಸಗಳ ಎಂ.ಓ.ಯು. ಗುರಿಗೆ ಎದುರಾಗಿ 410 ಮಾನವ ದಿವಸಗಳ – ಆಂತರಿಕ ಹಾಗೂ ಬಾಹ್ಯ ತರಬೇತಿ ನೀಡಿದೆ. ಈ ತರಬೇತಿಗಳು ಹಣಕಾಸು ನಿರ್ವಹಣೆ, ಗಣಕಯಂತ್ರ ತರಬೇತಿ, ಕಾರ್ಪೋರೇಟ್ ಗವರ್‌ನೆನ್ಸ್, ವ್ಯಕ್ತಿತ್ವ ಅಭಿವೃದ್ಧಿ, ನಿಗಮದ ಸಾಮಾಜಿಕ ಹೊಣೆಗಾರಿಕೆ, ಮಾಹಿತಿ ಹಕ್ಕು ಕಾಯ್ದೆ,. ಆರ್‌ಬಿಟ್ರೇಷನ್, ವಾಣಿಜ್ಯ ಸಂವಹನ, ಕೆಲಸ ಮತ್ತು ಹರ್ಷ.



Training programme on “Accupressure - The Miracle of Stress Relief” for Employees

## 21. ನಿಗಮದ ಸಾಮಾಜಿಕ ಹೊಣೆಗಾರಿಕೆ

ನಿಗಮವು, ಬಳಲುತ್ತಿರುವ ಬಡಜನರ ಚಿಕಿತ್ಸೆಗಾಗಿ ಮತ್ತು ಬಡತನವನ್ನು ಹೋಗಲಾಡಿಸುವಲ್ಲಿ ಹಾಗು ಕೆಳವರ್ಗದ ಜನರಿಗೆ ವಿದ್ಯೆ ಕಲಿಸಲು ಉತ್ತೇಜಿಸುವುದಕ್ಕೆ ಸರ್ಕಾರದೊಂದಿಗೆ ಕೈ ಜೋಡಿಸಿದೆ. ಪ್ರಸ್ತುತ ವರ್ಷ, ನಿಗಮವು ₹ 4.10 ಕೋಟಿಗಳ ದೇಣಿಗೆ ನೀಡಿದ್ದು, ವಿವರಗಳು ಈ ಕೆಳಕಂಡಂತಿದೆ.

| | | ₹ ಕೋಟಿಗಳಲ್ಲಿ |
|---|---|---|
| 1) | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | 2.50 |
| 2) | ಕರ್ನಾಟಕ ನೆರೆ ಪರಿಹಾರ ನಿಧಿ | 1.50 |
| 3) | ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ | 0.05 |
| 4) | ಕಿದ್ವಾಯ್ ಮೆಮೊರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿ | 0.05 |
| | | 4.10 |

## 22. ಇಂಧನ ಉಳಿತಾಯ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಹಾಗೂ ಇತರೆ

ಕಂಪನಿಗಳ (ನಿರ್ದೇಶಕರ ವರದಿಯ ಬಹಿರಂಗಗೊಳಿಕೆ) ನಿಯಮ 1988 ರೊಂದಿಗೆ ಓದಿಕೊಳ್ಳಲಾದ ಕಂಪನಿ ಕಾಯ್ದೆ 1956 ಸೆಕ್ಷನ್ 217(1)(ಇ) ಪ್ರಕಾರ ಅವಶ್ಯವಿರುವ ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.




## 23. ಸಭೆಗಳು

2009–10ರ ಸಾಲಿನಲ್ಲಿ ನಿಗಮವು 04 ನಿರ್ದೇಶಕ ಮಂಡಳಿ ಸಭೆಗಳನ್ನು ನಡೆಸಿತು. ನಿಗಮದ 6ನೇ ವಾರ್ಷಿಕ ಮಹಾ ಸಭೆಯು ದಿನಾಂಕ 29.08.2009ರಲ್ಲಿ ನಡೆಯಿತು.

## 24. ನಿರ್ದೇಶಕರ ಮಂಡಳಿ

ಸರ್ಕಾರವು, ಶ್ರೀ ಎಲ್.ವಿ. ನಾಗರಾಜನ್, ಭಾ.ಆ.ಸೇ., ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ ಇವರನ್ನು ನಿಗಮದ ನಿರ್ದೇಶಕರು ಹಾಗೂ ಅಧ್ಯಕ್ಷರನ್ನಾಗಿ, ಶ್ರೀ ಎಂ.ಆರ್ ಶ್ರೀನಿವಾಸ ಮೂರ್ತಿಅವರ ಜಾಗಕ್ಕೆ ನೇಮಿಸಿದೆ. ಶ್ರೀ ಅರವಿಂದ ಜನ್ನು, ಭಾ.ಆ.ಸೇ., ಕರ್ನಾಟಕ ರಾಜ್ಯ ಅಬಕಾರಿ ಆಯುಕ್ತರನ್ನು ನಿಗಮದ ನಿರ್ದೇಶಕರಲ್ಲಿ ಒಬ್ಬರನ್ನಾಗಿ ಶ್ರೀ ಯೋಗೇಂದ್ರ ತ್ರಿಪಾಠಿ, ಭಾ.ಆ.ಸೇ., ಇವರ ಜಾಗಕ್ಕೆ ನೇಮಿಸಿದೆ. ನಿರ್ದೇಶಕರುಗಳ ಬದಲಾವಣೆಯ ವಿವರ ಈ ಕೆಳಕಂಡಂತೆ ಇದೆ:

| ಕ್ರಮ ಸಂಖ್ಯೆ | ಹೆಸರು | ನೇಮಕಗೊಂಡ ದಿನಾಂಕ | ಸಮಾಪ್ತಿಯ ದಿನಾಂಕ |
|---|---|---|---|
| 1 | ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿ | - | 23.03.2010 |
| 2 | ಶ್ರೀ ಎಲ್.ವಿ. ನಾಗರಾಜನ್, | 25.03.2010 | - |
| 3 | ಶ್ರೀ ಅರವಿಂದ ಜನ್ನು | 02.06.2010 | - |
| 4 | ಶ್ರೀ ಯೋಗೇಂದ್ರ ತ್ರಿಪಾಠಿ, | - | 02.06.2010 |

ಶ್ರೀ ಎಲ್.ವಿ. ನಾಗರಾಜನ್ ಮತ್ತು ಶ್ರೀ ಅರವಿಂದ್ ಜನ್ನು ಇವರುಗಳು ನಿಗಮದ ಮಂಡಳಿಯ ನಿರ್ದೇಶಕರಾಗಿ ನೇಮಕಗೊಂಡಿದ್ದನ್ನು ಮಂಡಳಿಯು ಸ್ವಾಗತಿಸುತ್ತದೆ. ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿ ಮತ್ತು ಶ್ರೀ ಯೋಗೇಂದ್ರ

ತ್ರಿಪಾಠಿ ಇವರುಗಳು ತಮ್ಮ ಅವಧಿಯಲ್ಲಿ ನಿಗಮಕ್ಕೆ ಸಲ್ಲಿಸಿರುವ ಸೇವೆಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದೆ.

## 25. ನಿರ್ದೇಶಕರ ಹೊಣೆಗಾರಿಕೆಯ ಹೇಳಿಕೆ

ಕಂಪನಿ ಕಾಯ್ದೆ, 1956ರ ಸೆಕ್ಷನ್ 217(2ಎಎ) ಅನುಸಾರ, ತಮಗೆ ಸಾಧ್ಯವಾದಷ್ಟು ತಿಳಿದ ಮಟ್ಟಿಗೆ ಪಡೆದ ವಿಷಯ ಮತ್ತು ವಿವರಗಳಿಗನುಸಾರ ತಮ್ಮ ನಿರ್ದೇಶಕರುಗಳು ಈ ಕೆಳಗಿನಂತೆ ಹೇಳಿಕೆ ನೀಡಿರುತ್ತಾರೆ:

31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಸಂಬಂಧಪಟ್ಟ ಲೆಕ್ಕಗಳ ಗುಣಮಟ್ಟವನ್ನು ಅನುಸರಿಸಲಾಗಿದೆ.

ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಿರುವಂತೆ, ಸೂಕ್ತ ಲೆಕ್ಕಾಚಾರ ಪದ್ಧತಿಗಳನ್ನು ಆಯ್ದುಕೊಂಡು ಸತತವಾಗಿ ಅಳವಡಿಸಲಾಗಿದೆ. ಅಗತ್ಯವಿದ್ದಾಗ, ಯುಕ್ತ ಹಾಗೂ ವಿವೇಚನಾಯುಕ್ತ ಲೆಕ್ಕಧೋರಣೆಗಳನ್ನು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಇದರಿಂದ, 31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಕೊನೆಯಲ್ಲಿದ್ದ ನಿಗಮದ ಆಗು-ಹೋಗುಗಳ ನೈಜ ಮತ್ತು ಯಥಾಸ್ಥಿತಿಯ ಅರಿವಾಗುತ್ತದೆ ಮತ್ತು ನಿಗಮದ ಲಾಭನಷ್ಟಗಳ ಸ್ಥಿತಿಯು ಸ್ಪಷ್ಟಪಡುತ್ತದೆ.


Wine appreciation course

ನಿಗಮದ ಆಸ್ತಿಯನ್ನು ಸಂರಕ್ಷಿಸಲು, ಮೋಸ ಮತ್ತು ಇತರ ಅಕ್ರಮಗಳನ್ನು ಪತ್ತೆಹಚ್ಚಲು ಹಾಗೂ ತಡೆಗಟ್ಟಲು, ಕಂಪನಿ ಕಾಯ್ದೆ 1956ರ ಅನುಸಾರ ಅಗತ್ಯವಿರುವ, ಲೆಕ್ಕಪದ್ಧತಿಯ ವಿಸ್ತೃತ ದಾಖಲೆಗಳನ್ನು ನಿರ್ವಹಿಸುವಲ್ಲಿ, ಸೂಕ್ತವಾದ ಸಾಕಷ್ಟು ಎಚ್ಚರಿಕೆಯನ್ನು ವಹಿಸಲಾಗಿದೆ.

31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಲೆಕ್ಕಪತ್ರಗಳನ್ನು, ನಿಗಮವು ನಿರಂತರವಾಗಿ ಮುಂದೆ ಸಾಗುವ ದೃಷ್ಟಿಯಿಂದ ಸಿದ್ಧಪಡಿಸಲಾಗಿರುತ್ತದೆ.

## 26. ಕಾರ್ಪೊರೆಟ್ ಆಡಳಿತ

ಕಾರ್ಪೊರೆಟ್ ಆಡಳಿತದ ವರದಿಯನ್ನು ಅನುಬಂಧ-2 ಆಗಿ ಈ ವರದಿಗೆ ಸೇರಿಸಲಾಗಿದೆ.

## 27. ಕಂಪನಿ ಕಾಯ್ದೆ, 1956ರ ಸೆಕ್ಷನ್ 217(2ಎ)ರ ಅನುಸಾರ ಉದ್ಯೋಗಿ ವಿವರಗಳು

ಕಂಪನಿ (ಉದ್ಯೋಗಿ ವಿವರಗಳ) ನಿಯಮಗಳು, 1975ರೊಂದಿಗೆ ಓದಿಕೊಳ್ಳಲಾದ, ಕಂಪನಿ ಕಾಯ್ದೆ, 1956ರ ಸೆಕ್ಷನ್ 217(2ಎ)ರಲ್ಲಿ ನಿಗದಿಪಡಿಸಿರುವ ಸಂಭಾವನೆಯನ್ನು ಪಡೆದವರ ಸಂಖ್ಯೆ "ಶೂನ್ಯ". ಏಕೆಂದರೆ ನಿಗಮದ ಯಾವುದೇ ಉದ್ಯೋಗಿಯು ವಾರ್ಷಿಕ ₹ 24 ಲಕ್ಷ ಅಥವಾ ಹೆಚ್ಚು ಅಥವಾ ಮಾಸಿಕ ₹ 2.00 ಲಕ್ಷ ಮತ್ತು ಹೆಚ್ಚಿನ ಸಂಬಾವನೆಯನ್ನು ಪಡೆದಿರುವುದಿಲ್ಲ.

## 28. ನಿಗದಿತ ಠೇವಣಿ

ಕಂಪನಿ ಕಾಯ್ದೆ, 1956ರ ಸೆಕ್ಷನ್ 58(ಎ)ರ ಅನ್ವಯ ನಿಗಮವು ಸಾರ್ವಜನಿಕರಿಂದ ಯಾವುದೇ ನಿಗದಿತ ಠೇವಣಿ ಪಡೆದಿರುವುದಿಲ್ಲ. ಆದ್ದರಿಂದ ಆಸ್ತಿ-ಹೊಣೆಗಾರಿಕೆಯ ದಿನಾಂಕಕ್ಕೆ ಕೊಡಬೇಕಾದ ಯಾವುದೇ ಮೂಲ ಮೊತ್ತ ಅಥವಾ ಬಡ್ಡಿ ಬಾಕಿ ಇರುವುದಿಲ್ಲ.




## 29. ಮಾಹಿತಿ ಹಕ್ಕು ಕಾಯ್ದೆ

ನಿಗಮವು, ಒಂದು ಸಾರ್ವಜನಿಕ ಪ್ರಾಧಿಕಾರವಾಗಿ, ಮಾಹಿತಿ ಹಕ್ಕು ಕಾಯ್ದೆ 2005ನ್ನು ಅನುಸರಿಸುವಲ್ಲಿ ಕ್ರಮಗಳನ್ನು ತೆಗೆದುಕೊಂಡಿದೆ. ಪ್ರಸ್ತುತ ವರ್ಷ ನಿಗಮವು ಮಾಹಿತಿ ಹಕ್ಕು ಕಾಯ್ದೆ 2005ರ ಪ್ರಕಾರ, ಮಾಹಿತಿ ಕೋರಿ ಸಲ್ಲಿಸಿದ 37 ಅರ್ಜಿಗಳನ್ನು ಪಡೆದಿರುತ್ತದೆ ಈ ಎಲ್ಲಾ ಅರ್ಜಿಗಳನ್ನು ಬಗೆಹರಿಸಲಾಗಿದೆ ಹಾಗೂ 31.03.2010ಕ್ಕೆ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.



Officers and the employees attending a Training Programme on Work - Enjoyment & Progress

## 30. ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪುನರ್ವಿಮರ್ಶೆ

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ನೀಡುವ, ನಿಗಮದ ನಿರ್ವಹಣಾ ಫಲಿತಾಂಶದ ಮೇಲಿನ ಟಿಪ್ಪಣಿಯನ್ನು, ಅವರಿಂದ ಪಡೆದ ನಂತರ ಈ ವರದಿಗೆ ಸೇರಿಸಲಾಗುವುದು.

## 31. ಲೆಕ್ಕಪರಿಶೋಧಕರು

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು, ಮೆ॥ ವಿ.ಕೆ ನಿರಂಜನ್ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು, ಇವರನ್ನು, 2009–10ನೇ ಸಾಲಿಗೆ, ನಿಗಮದ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಿದ್ದಾರೆ.

## 32. ಕೃತಜ್ಞತೆಗಳು

ನಿರ್ದೇಶಕ ಮಂಡಳಿಯು, ಕರ್ನಾಟಕ ಸರ್ಕಾರಕ್ಕೆ ಅದರಲ್ಲೂ ಆರ್ಥಿಕ ಇಲಾಖೆಗೆ, ಅಬಕಾರಿ ಆಯುಕ್ತರು, ಜಂಟಿ ಅಬಕಾರಿ ಆಯುಕ್ತರು ಮತ್ತು ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಕೃತಜ್ಞತೆಯನ್ನು ಮತ್ತು ವಂದನೆಗಳನ್ನು ಅರ್ಪಿಸಲಿಚ್ಛಿಸುತ್ತಾರೆ.

ನಿಗಮದ ವ್ಯವಹಾರಗಳಿಗೆ ಸತತ ಸಹಾಯ ನೀಡುತ್ತಿರುವ ಬ್ಯಾಂಕರುಗಳಿಗೆ, ನಿಮ್ಮ ನಿರ್ದೇಶಕರುಗಳು ಮೆಚ್ಚುಗೆ ಸೂಚಿಸುತ್ತಾರೆ.

ಸಹಾಯ ಮತ್ತು ಸಹಕಾರ ನೀಡಿದ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು, ಪ್ರಧಾನ ಅಕೌಂಟೆಂಟ್ ಜನರಲ್‌ರವರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ) ಕರ್ನಾಟಕ, ಶಾಸನಬದ್ಧ ಲೆಕ್ಕಪರಿಶೋಧಕರಾದ ಶ್ರೀ ವಿ.ಕೆ. ನಿರಂಜನ್ ಮತು ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಫಿಲಿಪೋಸ್ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಆಂತರಿಕ ಲೆಕ್ಕಪರಿಶೋಧಕರುಗಳನ್ನು ವಿಶೇಷವಾದ ಉಲ್ಲೇಖಕ್ಕೆ ಅರ್ಹರಾದವರು ಎಂದು ನಿರ್ದೇಶಕರು ಗುರುತಿಸಲಿಚ್ಛಿಸುತ್ತಾರೆ.




ಅವಮೂಲ್ಯ ಸರಬರಾಜುದಾರರು, ಚಿಲ್ಲರೆ ಮಾರಾಟಗಾರರು, ಮದ್ಯಸಾರ ತಯಾರಕರು ಮತ್ತು ಇತರೆ ವ್ಯಾವಹಾರಿಕ ಸಹಚರರ ಸಹಾಯಕ್ಕೆ ನಿಮ್ಮ ನಿರ್ದೇಶಕರುಗಳು ವಂದನೆಗಳನ್ನು ಅರ್ಪಿಸಲಿಚ್ಛಿಸುತ್ತಾರೆ. ಮುಂದೆಯು ಇದೇ ರೀತಿಯ ಸಹಾಯ ಹಾಗೂ ಸಹಕಾರ ಬರುತ್ತದೆ ಎಂದು ನಾವು ಎದುರು ನೋಡುತ್ತೇವೆ.

ನಿಗಮದ ಪ್ರಗತಿಗೆ ಮತ್ತು ಏಳ್ಗೆಗೆ, ಅಧಿಕಾರಿಗಳು ಮತ್ತು ಎಲ್ಲ ಸಿಬ್ಬಂದಿ ವರ್ಗದವರು ನೀಡುತ್ತಿರುವ ಅಮೂಲ್ಯ ಕೊಡುಗೆ ಮತ್ತು ಉತ್ತಮ ಸಹಕಾರಕ್ಕೆ ಅತಿಯಾದ ಮೆಚ್ಚುಗೆಯನ್ನು ಸೂಚಿಸುತ್ತ ನಿಮ್ಮ ನಿರ್ದೇಶಕರು ಇಲ್ಲಿ ದಾಖಲಿಸಲು ಇಚ್ಛಿಸುತ್ತಾರೆ.

ಪ್ರಚಾರದ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸುದ್ದಿಮಾಧ್ಯಮಗಳ ಸತತವಾದ ಸಹಾಯವನ್ನು ಇಲ್ಲಿ ದಾಖಲಿಸಲು ನಿರ್ದೇಶಕರು ಇಚ್ಛಿಸುತ್ತಾರೆ.

ನಿರ್ದೇಶಕ ಮಂಡಳಿಯ ಪರವಾಗಿ

ಸ್ಥಳ : ಬೆಂಗಳೂರು
ದಿನಾಂಕ : 30.07.2010

**ಎಲ್.ವಿ. ನಾಗರಾಜನ್**
ಅಧ್ಯಕ್ಷರು

## ಅನುಬಂಧ - 1

**ಕಂಪನಿಗಳ (ನಿರ್ದೇಶಕರ ಮಂಡಳಿಯ ವರದಿಯಲ್ಲಿ ಘೋಷಿಸುವ ಮಾಹಿತಿಗಳು) ನಿಯಮಗಳು 1988ರ ಅಡಿ ನಿರ್ದೇಶಕರ ವರದಿಗೆ ಅನುಬಂಧ**

### ಅ. ಇಂಧನ ಉಳಿತಾಯ

ನಿಗಮವು ಒಂದು ವ್ಯಾಪಾರ ಉದ್ಯಮವಾಗಿರುವುದರಿಂದ ಇಂಧನವನ್ನು ಕಛೇರಿ ಕೆಲಸಕ್ಕೆ ಮಾತ್ರ ಬಳಸುತ್ತಿದೆ.

### ಆ. ತಂತ್ರಜ್ಞಾನ ಅಳವಡಿಕೆ

ನಿಗಮವು ಒಂದು ವ್ಯಾಪಾರ ಉದ್ಯಮವಾಗಿರುವುದರಿಂದ ಯಾವುದೇ ತಂತ್ರಜ್ಞಾನವನ್ನು ಯಾರಿಂದಲೂ ಪಡೆದಿರುವುದಿಲ್ಲ.

### ಇ. ವಿದೇಶೀ ವಿನಿಮಯ

2009-10ರಲ್ಲಿ ನಿಗಮವು ವಿದೇಶೀ ವಿನಿಮಯವನ್ನು ಗಳಿಸುವುದಾಗಲಿ ಅಥವಾ ಬಳಸುವುದಾಗಲಿ ಮಾಡಿರುವುದಿಲ್ಲ.

## ಅನುಬಂಧ - 2

### ಕಾರ್ಪೋರೇಟ್ ಆಡಳಿತದ ವರದಿ

### 1. ಕಾರ್ಪೋರೇಟ್ ಆಡಳಿತದ ತತ್ವ

ನ್ಯಾಯವಾದ, ಪಾರದರ್ಶಕವುಳ್ಳ ಮತ್ತು ಲೆಕ್ಕಬದ್ಧ ತತ್ವಗಳೇ, ಒಳ್ಳೆಯ ಆಡಳಿತಕ್ಕೆ ತಳಪಾಯವೆಂದು ನಿಗಮವು ನಂಬಿರುತ್ತದೆ. ಒಳ್ಳೆಯ ಕಾರ್ಪೋರೇಟ್ ಆಡಳಿತವು ಒಂದು ನಿರಂತರ ಕಾರ್ಯವೆಂದು ನಿಗಮವು ಗುರುತಿಸುತ್ತದೆ ಮತ್ತು ಸ್ಟೇಕ್ ಹೋಲ್ಡರ್ಸ್‌ಗಳ, ಬಂಡವಾಳದಾರರ, ಸಾಲ ನೀಡುವವರ, ಸರ್ಕಾರದ ಹಾಗು ಇತರರ ಮೇಲಿನ ಹಿತಾಸಕ್ತಿಯಿಂದ ಕಾರ್ಪೋರೇಟ್ ಆಡಳಿತವನ್ನು ಮತ್ತಷ್ಟು ಉತ್ತಮಗೊಳಿಸುವಲ್ಲಿ ಬದ್ದವಾಗಿದೆ.

### 2. ನಿರ್ದೇಶಕ ಮಂಡಳಿ

ಅ) 31.03.2010ಕ್ಕೆ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಸೇರಿದಂತೆ ಮಂಡಳಿಯಲ್ಲಿ 04 ನಿರ್ದೇಶಕರಿದ್ದರು. ಉಳಿದಿಬ್ಬರು ನಿರ್ದೇಶಕರುಗಳು ಆರ್ಥಿಕ ಇಲಾಖೆಯಿಂದ ಮತ್ತು ಅಬಕಾರಿ ಇಲಾಖೆಯಿಂದ ತಲಾ ಒಬ್ಬರಂತೆ ನೇಮಕಗೊಂಡಿರುತ್ತಾರೆ.

ಆ) ನಿರ್ದೇಶಕರುಗಳ ಕಿರುಪರಿಚಯವನ್ನು ಈ ಕೆಳಗಿನಂತೆ ಒದಗಿಸಲಾಗಿದೆ:

### ಶ್ರೀ ಎಲ್.ವಿ. ನಾಗರಾಜನ್ ಭಾ.ಆ.ಸೇ.

ಶ್ರೀ ಎಲ್.ವಿ ನಾಗರಾಜನ್, ಭಾ.ಆ.ಸೇ., 1979ರಲ್ಲಿ ಭಾರತ ಆಡಳಿತ ಸೇವೆಗೆ ಸೇರಿದವರಾಗಿರುತ್ತಾರೆ. ಅವರು ಮದ್ರಾಸಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್‌ನಾಲಜಿಯ, ಮೆಕ್ಯಾನಿಕಲ್ ಇಂಜಿನಿಯರಿಂಗ್‌ನ ಬಿ.ಟೆಕ್ ಪಧವೀದರರು. ಇವರು ಸರ್ಕಾರದ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ಇವರು ಉಪ ಕಾರ್ಯದರ್ಶಿ (ಆಯವ್ಯಯ), ಕಾರ್ಯದರ್ಶಿ (ಹಣಕಾಸು ಯೋಜನೆ) ಮತ್ತು ಪ್ರಸ್ತುತ ಪ್ರಧಾನ ಕಾರ್ಯದರ್ಶಿಗಳಾಗಿ ಹಣಕಾಸು ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಭಾರತ ಸರ್ಕಾರದ ಜವಳಿ ಇಲಾಖೆಯ ರೇಷ್ಮೆ ರಫ್ತು ಪರಿಷತ್‌ನ, ಮುಂಬೈನ ಕಾರ್ಯಕಾರಿ ನಿರ್ದೇಶಕರಾಗಿ ಭಾರತದಲ್ಲಿ 'ರೇಷ್ಮೆ ಇಂಡಿಯಾ' ಎಂಬ ಮೊದಲ ಅಂತರರಾಷ್ಟ್ರೀಯ ರೇಷ್ಮೆ ಪ್ರದರ್ಶನವನ್ನು ಆರಂಭ ಮಾಡಿ ಅದನ್ನು ಪರಿಪೂರ್ಣ ನಿರ್ವಹಿಸಿದರು. ಮೂಲಭೂತ ಸೌಕರ್ಯಗಳ ಇಲಾಖೆಗಳಲ್ಲಿ ಇವರಿಗೆ ದೀರ್ಘ ಅವಧಿಯ ಅನುಭವವಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ, ದಾಖಲೆ ಅವಧಿಯಲ್ಲಿ ಸುಮಾರು 140 ಸೇತುವೆಗಳನ್ನು ನಿರ್ಮಿಸಿರುವ ಹೆಗ್ಗಳಿಕೆ ಇವರದ್ದು. ಇವರು ರಾಜ್ಯ ಹೆದ್ದಾರಿಗಳ ನಿರ್ವಹಣಾ ಯೋಜನೆಯ ರುವಾರಿಯಾಗಿದ್ದರು. ಕರ್ನಾಟಕಕ್ಕೆ ಮೊದಲ ವಿಶ್ವ ಬ್ಯಾಂಕ್ ಸಾಲವನ್ನು ಪಡೆಯುವಲ್ಲಿ ಯಶಸ್ವಿಯಾಗಿ ಕರ್ನಾಟಕ ರಾಜ್ಯ ಹೆದ್ದಾರಿಗಳ ಸುಧಾರಣಾ ಯೋಜನೆ, ಹಂತ–1 ಆರಂಭಿಸಿದರು. ಕೃಷ್ಣ ಭಾಗ್ಯ ಜಲ ನಿಗಮದ ನಿರ್ದೇಶಕರು (ಹಣಕಾಸು) ಆಗಿದ್ದಾಗ ಕೃಷ್ಣ ಮೇಲ್ದಂಡೆ ಯೋಜನೆಗೆ ಬಾಂಡ್‌ಗಳ ಮೂಲಕ ₹ 2500 ಕೋಟಿಗಳ ಹಣಕಾಸಿನ ವ್ಯವಸ್ಥೆ ಮಾಡಿದರು. ನೀರಾವರಿ ವಿಭಾಗದ ಜಲ ಸಂಪನ್ಮೂಲ ಇಲಾಖೆಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ 2 ವರ್ಷಗಳಕಾಲ ಕೆಲಸ ನಿರ್ವಹಿಸಿರುತ್ತಾರೆ. ಹಾಗೂ ಬೆಂಗಳೂರಿನ ಭೂಗರ್ಭ ಮೆಟ್ರೋ ಯೋಜನೆಯ ಆರಂಭ ಕಾಲದಲ್ಲಿ ಕೆಲಸ ನಿರ್ವಹಿಸಿರುತ್ತಾರೆ.

### ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿ ಭಾ.ಆ.ಸೇ.

ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿ ಭಾ.ಆ.ಸೇ., 1975ರಲ್ಲಿ ಪೊಲಿಟಿಕಲ್ ಸೈನ್ಸ್‌ನ ಮಾಸ್ಟರ್ಸ್ ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದರು. ಗ್ರಾಮೀಣ ಅಭಿವೃಧಿ (ಪ್ಲಾನಿಂಗ್ ಸ್ಕ್ರೀಮ್)ನ ಮಾಸ್ಟರ್ಸ್ ಪದವಿಯನ್ನು ಯುನೈಟೆಡ್ ಕಿಂಗ್‌ಡಂ ನ ಪೂರ್ವ ಆ್ಯಂಗ್ಲಿಯ ವಿಶ್ವವಿದ್ಯಾನಿಲಯದಿಂದ ಮತ್ತು ಮದರಾಸು ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರ ಮಾಸ್ಟರ್ಸ್ ಪದವಿಯನ್ನು ಪಡೆದಿದ್ದಾರೆ. ಎಂ.ಆರ್. ಶ್ರೀನಿವಾಸ ಮೂರ್ತಿಯವರು 28.06.07 ರಿಂದ 23.03.10ರವರೆಗೆ ನಿಗಮದ ನಿರ್ದೇಶಕರು ಹಾಗೂ ಅಧ್ಯಕ್ಷರಾಗಿದ್ದರು.

ಇವರು ಭಾರತ ಸರ್ಕಾರದ ಹಾಗೂ ಕರ್ನಾಟಕ ಸರ್ಕಾರದ ಹಲವಾರು ಇಲಾಖೆಗಳಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಉತ್ಪನ್ನಗಳ ನಿಗಮ; ನಿರ್ದೇಶಕರು, ಮಾಹಿತಿ ಮತ್ತು ಪ್ರಚಾರ ನಿಗಮ; ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್, ಮೈಸೂರು ಜಿಲ್ಲೆ; ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಯಾಗಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ; ಪ್ರಧಾನ ಕಾರ್ಯದರ್ಶಿ, ಭಾರತ ಚುನಾವಣಾ ಆಯೋಗ, ನವದೆಹಲಿ; ನಿಯಂತ್ರಣಾಧಿಕಾರಿ,

ಇಸ್ರೋ ಉಪಗ್ರಹ ಕೇಂದ್ರ, ಅಂತರಿಕ್ಷ ಇಲಾಖೆ, ಬೆಂಗಳೂರು; ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಆಯುಕ್ತರು, ರಾಜ್ಯ ಅಬಕಾರಿ; ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ; ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ; ಪ್ರಧಾನ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್; ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ; ಅಪರ ಮುಖ್ಯ ಕಾರ್ಯದರ್ಶಿ, ಹಣಕಾಸು ಇಲಾಖೆ; ಹಾಗೂ ಪ್ರಸ್ತುತ ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

### ಶ್ರೀ ಅಜಯ್ ಸೇಠ್, ಭಾ.ಆ.ಸೇ.

ಶ್ರೀ ಅಜಯ್ ಸೇಠ್, ಭಾ.ಆ.ಸೇ., 1987ರಲ್ಲಿ ಭಾರತ ಆಡಳಿತ ಸೇವೆಗೆ ಸೇರಿದವರಾಗಿರುತ್ತಾರೆ. ಇವರಿಗೆ 11 ವರ್ಷಗಳ ಕಾಲ ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರಗಳ ಹಣಕಾಸು ನಿರ್ವಹಣೆಯ ಅನುಭವವಿದೆ ಮತ್ತು 3 ವರ್ಷಗಳು ಏಷಿಯನ್ ಡೆವಲೆಪ್‌ಮೆಂಟ್ ಬ್ಯಾಂಕ್‌ನಲ್ಲಿ ಅಭಿವೃದ್ಧಿಪರ ಹಣಕಾಸಿನ ನಿರ್ವಹಣೆಯ ಅನುಭವವಿದೆ. ಇವರ ವಿದ್ಯಾರ್ಹತೆ – ಇಂಜಿನಿಯರಿಂಗ್ ಪದವಿ, ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಮಾಸ್ಟರ್ಸ್ ಪದವಿ ಮತ್ತು ಫೈನಾನ್‌ಷಿಯಲ್ ಮ್ಯಾನೇಜ್ಮೆಂಟ್‌ನ ಸ್ನಾತಕೋತ್ತರ ಡಿಪ್ಲೊಮ ಇವೇ ಮೊದಲಾದವುಗಳನ್ನು ಪಡೆದಿರುತ್ತಾರೆ. ಪ್ರಸ್ತುತ ಇವರು ಕರ್ನಾಟಕ ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಯಾಗಿ ಕೆಲಸ ನಿರ್ವಹಿಸುತ್ತಿರುತ್ತಾರೆ.

### ಶ್ರೀ ಯೋಗೇಂದ್ರ ತ್ರಿಪಾಠಿ, ಭಾ.ಆ.ಸೇ.

ಶ್ರೀ ಯೋಗೇಂದ್ರ ತ್ರಿಪಾಠಿ, ಭಾ.ಆ.ಸೇ., ಇವರನ್ನು ನಿಗಮದ ನಿರ್ದೇಶಕರಾಗಿ ಕರ್ನಾಟಕ ಸರ್ಕಾರವು ನೇಮಿಸಿದೆ. ಇವರು ಐ.ಐ.ಟಿ. ದಿಲ್ಲಿಯಲ್ಲಿ ಬಿ.ಟೆಕ್. ಪದವಿಯನ್ನು ಮತ್ತು ಬಿಹೇವಿಯರಲ್ ಸೈನ್ಸ್‌ನ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು 30.06.2008 ರಿಂದ 2.6.2010ರವರೆಗೆ ನಿಗಮದ ನಿರ್ದೇಶಕರಾಗಿದ್ದರು. ಇವರು ಸರ್ಕಾರದ ಹಲವಾರು ಸ್ಥಾನಗಳಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ಇದರಲ್ಲಿ ಅಬಕಾರಿ ಆಯುಕ್ತರು, ಕಾರ್ಯದರ್ಶಿ, ಹಣಕಾಸು ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಆಯುಕ್ತರು, ಪ್ರವಾಸೋದ್ಯಮ; ಅಯುಕ್ತರು , ಖನಿಜ ಮತ್ತು ಭೂವಿಜ್ಞಾನ; ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸ ಅಭಿವೃದ್ಧಿ ನಿಗಮ ನಿ. ಇವರು ಈ ಹಿಂದೆ ಯುನೈಟೆಡ್ ನೇಷನ್ಸ್‌ನ ಕೊಸೊವೊದಲ್ಲಿ ಶಾಂತಿ ಪಾಲನಾ ಕಾರ್ಯದಲ್ಲಿ ಕೆಲಸ ನಿರ್ವಹಿಸಿರುತ್ತಾರೆ.

### ಶ್ರೀ ಅರವಿಂದ ಜನ್ನು, ಭಾ.ಆ.ಸೇ

ಶ್ರೀ ಅರವಿಂದ ಜನ್ನು, ಭಾ.ಆ.ಸೇ. ಅಧಿಕಾರಿ. ಇವರು ಪ್ರಸ್ತುತ ಕರ್ನಾಟಕ ರಾಜ್ಯ ಅಬಕಾರಿ ಆಯುಕ್ತರು ಹಾಗೂ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು. ಈ ಹಿಂದೆ ಗ್ರಾಮೀಣ ಅಭಿವೃದ್ಧಿ, ವ್ಯವಸಾಯ, ಅಗ್ರಿಕಲ್ಚರಲ್ ಕ್ರೆಡಿಟ್, ಸಕ್ಕರೆ, ರೇಷ್ಮೆ, ವಸತಿ ಹಾಗೂ ನಗರಾಭಿವೃದ್ಧಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಮಾಹಿತಿ ಮತ್ತು ಪ್ರಚಾರ, ಮಾಹಿತಿ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಅಭಿವೃದ್ಧಿ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

### ಡಾ. ಎಚ್. ಶಶಿಧರ್, ಭಾ.ಆ.ಸೇ

ಡಾ. ಎಚ್. ಶಶಿಧರ್, ಭಾ.ಆ.ಸೇ, ಇವರು 05.02.2009ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಜವಾಬ್ದಾರಿ ವಹಿಸಿಕೊಂಡರು. ಇವರು ರಾಜ್ಯಪಾಲರ ನಾಮಿನಿಯಾಗಿ ಪ್ರತಿ ಷೇರಿಗೆ ₹ 1000/– ಮೌಲ್ಯದ 250 ಇಕ್ವಿಟಿ ಷೇರುಗಳನ್ನು ಹೊಂದಿರುತ್ತಾರೆ. ಇವರು ಭೂವಿಜ್ಞಾನದಲ್ಲಿ ಮಾಸ್ಟರ್ಸ್ ಪದವಿಯನ್ನು ಮತ್ತು ಎಂ.ಫಿಲ್‌ಗಳನ್ನು ಪಡೆದಿರುತ್ತಾರೆ. ಇವರಿಗೆ ಮೈಸೂರಿನ ವಿಶ್ವವಿದ್ಯಾನಿಲಯದಿಂದ ಜನಸಂಖ್ಯಾ ಅಧ್ಯಯನಕ್ಕಾಗಿ ಡಾಕ್ಟರೇಟ್ ಪದವಿಯನ್ನು ನೀಡಿರುತ್ತಾರೆ. ಈ ಹಿಂದೆ ಇವರು ಡಿ.ಪಿ.ಎ.ಆರ್, ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿರುತ್ತಾರೆ. ಇವರು ಹಲವಾರು ಪ್ರಮುಖ ಸ್ಥಾನಗಳಲ್ಲಿ ಅಂದರೆ, ತಾಲ್ಲೂಕು ಪುನರ್‌ಸಂಘಟನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ; ಕಾರ್ಯದರ್ಶಿ, ರಾಜ್ಯದ 5ನೇ ವೇತನ ಆಯೋಗ, ಆಯುಕ್ತರು, ವ್ಯವಸಾಯ; ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ; ಕರ್ನಾಟಕ ಸರ್ಕಾರದ ಇನಸ್ಪೆಕ್ಟರ್ ಜನರಲ್ ಆಫ್ ರೆಜಿಸ್ಟ್ರೇಷನ್ ಮತ್ತು ಮುದ್ರಾಂಕ ಆಯುಕ್ತರು ಹಾಗೂ ಕರ್ನಾಟಕ ಜನಗಣತಿ ಯೋಜನೆಯ ನಿರ್ದೇಶಕರು ಮತ್ತು, ಉಪಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿರುತ್ತಾರೆ.

## ಮಂಡಳಿಯ ಸಭೆಗಳು

ಇ) 2009–10ರ ಸಾಲಿನಲ್ಲಿ 4 ಸಲ ಅಂದರೆ, 30.06.09, 29.08.09, 22.12.09 ಮತ್ತು 30.03.10ರಲ್ಲಿ ಸಭೆಗಳು ನಡೆದವು.

ಈ) ನಿರ್ದೇಶಕರ ಮಂಡಳಿಯ ರಚನೆ ಮತ್ತು ಸಂಬಂಧಿತ ಮಾಹಿತಿ

### ನಿರ್ದೇಶಕರುಗಳ ವಿವರಗಳು

| ಹೆಸರು (ನೇಮಕಗೊಂಡ ದಿನಾಂಕ) | ವಿಭಾಗ | ಮಂಡಳಿಯ ಸಭೆಗಳ ಸಂಖ್ಯೆ ಮತ್ತು ಹಾಜರಾತಿ | ಹಿಂದಿನ ವಾರ್ಷಿಕ ಮಹಾ ಸಭೆಯ ಹಾಜರಾತಿ (ಎ.ಜಿ.ಎಂ. ದಿನಾಂಕ: 29.08.09) | 31.03.10ಕ್ಕೆ ಇದ್ದ ಹೊರಗಿನ ನಿರ್ದೇಶಕರುಗಳು ಸಂಖ್ಯೆ | 31.03.10ಕ್ಕೆ ಇದ್ದ ಹೊರಗಿನ ಮಂಡಳಿಯ ಸದಸ್ಯತ್ವ / ಅಧ್ಯಕ್ಷರು |
|---|---|---|---|---|---|
| ಎಂ.ಆರ್. ಶ್ರೀನಿವಾಸ ಮೂರ್ತಿ | ಅಧ್ಯಕ್ಷರು | 3/3 | ಹೌದು | 14 | 1 |
| ಎಲ್.ವಿ. ನಾಗರಾಜನ್ (ನೇಮಕ 25.03.10) | ಅಧ್ಯಕ್ಷರು | 1/1 | ಇಲ್ಲ | 13 | - |
| ಅಜಯ್ ಸೇಠ್ | ಅಧಿಕಾರೇತರ ನಿರ್ದೇಶಕರು | 4/4 | ಹೌದು | 08 | - |
| ಯೋಗೇಂದ್ರ ತ್ರಿಪಾಠಿ | ಅಧಿಕಾರೇತರ ನಿರ್ದೇಶಕರು | 4/4 | ಹೌದು | - | - |
| ಡಾ. ಎಚ್. ಶಶಿಧರ್ | ವ್ಯವಸ್ಥಾಪಕ ನಿರ್ದೇಶಕರು | 4/4 | ಹೌದು | - | - |

## 3. ಲೆಕ್ಕಪರಿಶೋಧನಾ ಸಮಿತಿ

ನಿಗಮದ ಸಂದಿತ ಬಂಡವಾಳ ₹5 ಕೋಟಿಗಳಿಗಿಂತ ಕಡಿಮೆ ಇರುವುದರಿಂದ ಕಂಪನಿ ಕಾಯ್ದೆ 1956ರ ಭಾಗ 292(ಎ)ರ ಅಡಿ ಲೆಕ್ಕಪರಿಶೋಧನಾ ಸಮಿತಿಗೆ ಸಂಬಂಧಿಸಿದ ಷರತ್ತುಗಳು ಅನ್ವಯವಾಗುವುದಿಲ್ಲ.

## 4. ಬಹಿರಂಗಗೊಳಿಕೆ

ನಿರ್ದೇಶಕರ ಸಂಭಾವನೆ: ವ್ಯವಸ್ಥಾಪಕ ನಿರ್ದೇಶಕರಿಗೆ ನೀಡುವ ಸಂಭಾವನೆ ಕರ್ನಾಟಕ ಸರ್ಕಾರವು ನಿಗಧಿಪಡಿಸಿರುತ್ತದೆ. 2009–10ರ ಸಾಲಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದ ಸಂಭಾವನೆ ಈ ಕೆಳಗಿನಂತಿದೆ:

ಡಾ. ಎಚ್. ಶಶಿಧರ್, ವ್ಯವಸ್ಥಾಪಕ ನಿರ್ದೇಶಕರ ₹18.14 ಲಕ್ಷಗಳು.

ಅರೆಕಾಲಿಕ ನಿರ್ದೇಶಕರುಗಳಿಗೆ, ಮಂಡಳಿ ಸಭೆಯ ಆಸೀನ ಶುಲ್ಕ ಹೊರತು ಪಡಿಸಿ ಯಾವುದೇ ಸಂಭಾವನೆ ನೀಡಿರುವುದಿಲ್ಲ.

| ಕ್ರ. ಸಂ. | ನಿರ್ದೇಶಕರ ಹೆಸರು | ಸಭೆಯ ಆಸೀನ ಶುಲ್ಕ (₹) |
|---|---|---|
| 1. | ಎಂ.ಆರ್. ಶ್ರೀನಿವಾಸ ಮೂರ್ತಿ | 1500 |
| 2. | ಎಲ್.ವಿ. ನಾಗರಾಜನ್ | 500 |
| 3. | ಅಜಯ್ ಸೇಠ್ | 2000 |
| 4. | ಯೋಗೇಂದ್ರ ತ್ರಿಪಾಠಿ | 2000 |

## 5. ವಾರ್ಷಿಕ ಮಹಾ ಸಭೆಗಳು

ಅ) ಹಿಂದಿನ ಮೂರು ವಾರ್ಷಿಕ ಮಹಾ ಸಭೆಗಳ ವಿವರ

| ವರ್ಷ | ಸಭೆಯ ದಿನಾಂಕ | ವೇಳೆ | ಸ್ಥಳ |
|---|---|---|---|
| 2006-07 | 20.09.07 | 3.00 ಘಂಟೆ (ಮದ್ಯಾಹ್ನ) | ನೋಂದಾಯಿತ ಕಛೇರಿ |
| 2007-08 | 28.06.08 | 10.30 ಘಂಟೆ (ಬೆಳಿಗ್ಗೆ) | ನೋಂದಾಯಿತ ಕಛೇರಿ |
| 2008-09 | 29.08.09 | 11.00 ಘಂಟೆ (ಬೆಳಿಗ್ಗೆ) | ನೋಂದಾಯಿತ ಕಛೇರಿ |

ಆ) ಹಿಂದಿನ ನಾಲ್ಕು ವಾರ್ಷಿಕ ಮಹಾ ಸಭೆಗಳಲ್ಲಿ ಯಾವುದೇ ವಿಶೇಷ ತೀರ್ಮಾನಗಳನ್ನು ತೆಗೆದುಕೊಂಡಿರುವುದಿಲ್ಲ.

ಇ) ಹಿಂದಿನ ವಾರ್ಷಿಕ ಮಹಾ ಸಭೆಯಲ್ಲಿ ಯಾವುದೇ ತೀರ್ಮಾನವನ್ನು ಅಂಚೆಯ ಮೂಲಕ ತೆಗೆದುಕೊಂಡಿರುವುದಿಲ್ಲ.

## 6. ಪತ್ರ ವ್ಯವಹಾರದ ವಿಳಾಸ:

ನಿಗಮದ ನೋಂದಾಯಿತ ಕಛೇರಿಯ ವಿಳಾಸ:

**ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ**
ನಂ.78, ಸೀತಾಲಕ್ಷ್ಮಿ ಟವರ್ಸ್,
ಮಿಷನ್ ರಸ್ತೆ, ಬೆಂಗಳೂರು - 560 027

ಅನುಬಂಧ-1 ಮತ್ತು ಅನುಬಂಧ-2ಕ್ಕೆ ಸಹಿ

ಸ್ಥಳ : ಬೆಂಗಳೂರು
ದಿನಾಂಕ : 30.07.2010

**ಎಲ್.ವಿ. ನಾಗರಾಜನ್**
ಅಧ್ಯಕ್ಷರು

## ಕಂಪನಿ ಕಾಯ್ದೆ, 1956ರ ಕಲಮು 619(4)ರ ಅನ್ವಯ, 31ನೇ ಮಾರ್ಚ್ 2010ಕ್ಕೆ ಅಂತ್ಯಗೊಂಡ ವರ್ಷದ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಲೆಕ್ಕಪತ್ರಗಳ ಮೇಲೆ ಭಾರತದ ಕಂಪ್ಟ್ರೋಲರ್ ಮತ್ತು ಮಹಾಲೇಖಪಾಲರ ಟಿಪ್ಪಣಿ

ಕಂಪನಿ ಕಾಯ್ದೆ, 1956ರ ಅಡಿಯಲ್ಲಿ ವಿಧಿಸಿರುವಂತೆ, 31 ಮಾರ್ಚ್ 2010ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ವರದಿಗಳನ್ನು ನೀಡುವುದು ನಿಗಮದ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಂಪನಿ ಕಾಯ್ದೆ, 1956ರ ಕಲಮು 619(2)ರ ಅನ್ವಯ, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಂಪನಿ ಕಾಯ್ದೆ 1956ರ ಕಲಮು 227ರ ಅಡಿಯಲ್ಲಿ, ಅವರ ವೃತ್ತಿ ಸಂಸ್ಥೆಯಾದ Institute of Chartered Accountants of India ರವರು ನಿಗಧಿಪಡಿಸಿದ ಲೆಕ್ಕ ಪರಿಶೋಧನೆ ಮತ್ತು ಆಶ್ವಾಸನೆಯ ಪರಿಮಾಣಗಳ ಪ್ರಕಾರ ಸ್ವತಂತ್ರವಾಗಿ ಲೆಕ್ಕ ಪರಿಶೋಧನೆ ಮಾಡಿ ತಮ್ಮ ಅಭಿಪ್ರಾಯವನ್ನು ಸದರಿ ಆರ್ಥಿಕ ತಃಖ್ತೆಗಳ ಮೇಲೆ ನೀಡುವುದು ಅವರ ಜವಾಬ್ದಾರಿಯಾಗಿದೆ. ಅವರುಗಳು **01 ಜುಲೈ 2010**ರಂದು ನೀಡಿದ ಲೆಕ್ಕ ಪರಿಶೋಧನಾ ವರದಿಯಲ್ಲಿ ಹೀಗೆ ಮಾಡಲಾಗಿದೆಯೆಂದು ಹೇಳಲಾಗಿದೆ.

ಕಂಪನಿ ಕಾಯ್ದೆ 1956ರ ಕಲಮು 619(3)(ಬಿ) ಅನ್ವಯ, ನಾನು, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ, **"ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ"ದ 31 ಮಾರ್ಚ್ 2010ಕ್ಕೆ** ಅಂತ್ಯಗೊಂಡ ಆರ್ಥಿಕ ತಃಖ್ತೆಗಳ ಪೂರಕ ಲೆಕ್ಕ ಪರಿಶೋಧನೆ ಮಾಡಿದ್ದೇನೆ. ಶಾಸನಬದ್ಧ ಲೆಕ್ಕ ಪರಿಶೋಧಕರ ವರ್ಕಿಂಗ್ ಪೇಪರ್‌ಗಳನ್ನು ನೋಡದೆ ಸ್ವತಂತ್ರವಾಗಿ ಈ ಪೂರಕ ಲೆಕ್ಕ ಪರಿಶೋಧನೆಯನ್ನು ಮಾಡಲಾಗಿದೆ. ಮೂಲತ: ಈ ಪೂರಕ ಟಿಪ್ಪಣಿಯು, ಶಾಸನಬದ್ಧ ಲೆಕ್ಕ ಪರಿಶೋಧಕರು ಮತ್ತು ನಿಗಮದ ಸಿಬ್ಬಂದಿಗಳೊಡನೆ ನಡೆಸಿದ ವಿಚಾರಣೆ ಮತ್ತು ನಿಗಮದ ಕೆಲವು ಆಯ್ದ ದಾಖಲೆಗಳ ತಪಾಸಣೆಗೆ ಸೀಮಿತವಾಗಿದೆ. ಕಂಪನಿ ಕಾಯ್ದೆ 1956ರ ಕಲಮು 619(4)ರ ಅಡಿಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯ ಮೇಲೆ ಅಥವಾ ವರದಿಗೆ ಪೂರಕವಾಗಿ ಟಿಪ್ಪಣಿಯನ್ನು ಮಾಡಬೇಕಾದಂತಹ ಯಾವುದೇ ಮಹತ್ವದ ಅಂಶಗಳು ಸದರಿ ಪೂರಕ ಲೆಕ್ಕ ಪರಿಶೋಧನೆಯಲ್ಲಿ ನನ್ನ ಗಮನಕ್ಕೆ ಬಂದಿರುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು**
**ಆಡಿಟರ್ ಜನರಲ್‌ರವರ ಪರವಾಗಿ**

**ಡಿ. ಜೆ. ಭದ್ರಾ**
ಪ್ರಧಾನ ಮಹಾಲೇಖಪಾಲರು
(ಸಿವಿಲ್ ಮತ್ತು ಕಮರ್ಷಿಯಲ್ ಲೆಕ್ಕ ಪರಿಶೋಧನೆ)
ಕರ್ನಾಟಕ, ಬೆಂಗಳೂರು

ಸ್ಥಳ : ಬೆಂಗಳೂರು
ದಿನಾಂಕ : 2 ಆಗಸ್ಟ್ 2010

**ವಿ.ಕೆ. ನಿರಂಜನ ಮತ್ತು ಕಂ.**
ಚಾರ್ಟರ್ಡ್ ಅಕೌಂಟೆಂಟ್ಸ್

ಕುರುಬರ ಸಂಘದ ಕಟ್ಟಡ,
202 & 204, ಕನಕದಾಸ ವೃತ್ತ,
ಕಾಳಿದಾಸ ಮಾರ್ಗ,
ಗಾಂಧಿನಗರ, ಬೆಂಗಳೂರು - 560 009.

Ref No.: K 5389/16015/2010-11 01.07.10

## ಲೆಕ್ಕ ಪರಿಶೋಧಕರ ವರದಿ

ಗೆ
**ಷೇರುದಾರರು**
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

1. ಈ ವರದಿಗೆ ಲಗತ್ತಿಸಿದ, ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ದಿನಾಂಕ 31.3.2010 ರಲ್ಲಿದ್ದ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ, ಮತ್ತು ಅಂದಿಗೆ ಮುಕ್ತಾಯಗೊಂಡ ಲಾಭ ಮತ್ತು ನಷ್ಟ ತ:ಖ್ತೆ ಮತ್ತು ನಗದು ಚಲಾವಣಾ ಪಟ್ಟಿಯನ್ನು ನಾವು ಪರಿಶೋಧಿಸಿರುತ್ತೇವೆ. ಈ ಆರ್ಥಿಕ ಪಟ್ಟಿಗಳ ಜವಾಬ್ದಾರಿ ನಿಗಮದ ಆಡಳಿತ ವರ್ಗದ್ದಾಗಿರುತ್ತದೆ. ನಮ್ಮ ಪರಿಶೋಧನೆಯನ್ನು ಆಧರಿಸಿ, ಈ ಆರ್ಥಿಕ ಪಟ್ಟಿಗಳ ಮೇಲೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

2. ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿತವಾದ ಲೆಕ್ಕ ಪರಿಶೋಧನಾ ಪರಿಮಾಣಗಳಿಗೆ ಅನುಗುಣವಾಗಿ ನಾವು, ನಿಗಮದ ಲೆಕ್ಕ ಪರಿಶೋಧನೆ ಮಾಡಿರುತ್ತೇವೆ. ಆ ಪ್ರಕಾರ, ಗುಣಮಟ್ಟದ ಲೆಕ್ಕ ಪರಿಶೋಧನೆಗೆ ಬೇಕಾದ ಯೋಜನೆಯನ್ನು ಮಾಡಿಕೊಂಡು ಅದರಂತೆ ಲೆಕ್ಕ ಪರಿಶೋಧನೆ ಮಾಡಿ, ಸಂಸ್ಥೆಯು ನೀಡಿರುವ ಆರ್ಥಿಕ ವರದಿಗಳು ಯಾವುದೇ ದೋಷದಿಂದ ಮುಕ್ತವಾಗಿವೆ ಎಂಬುದನ್ನು ಸಾಧ್ಯವಾದಷ್ಟೂ ಖಚಿತ ಪಡಿಸಿಕೊಳ್ಳಬೇಕಾಗುತ್ತದೆ. ಆರ್ಥಿಕ ಪಟ್ಟಿಗಳಲ್ಲಿರುವ ಮೊತ್ತಗಳು ಮತ್ತು ಅದನ್ನು ಆಧರಿಸುವ ದಾಖಲೆಗಳು ಮತ್ತು ಆ ಕುರಿತಾದ ವಿವರಗಳನ್ನು ಪರೀಕ್ಷಾರ್ಥವಾಗಿ ವಿಮರ್ಶೆಗೆ ಒಳಪಡಿಸುವುದು ಲೆಕ್ಕ ಪರಿಶೋಧನೆಯ ಅಂಗವಾಗಿದೆ. ನಿಗಮದ ವ್ಯವಸ್ಥಾಪಕ ವರ್ಗವು ಅಳವಡಿಸಿದ ಲೆಕ್ಕ ತತ್ತ್ವಗಳು, ಮಹತ್ವದ ಅಂದಾಜುಗಳು, ಇವುಗಳನ್ನು ಪರೀಕ್ಷಿಸುವುದು ಮತ್ತು ಒಟ್ಟಾರೆ ಆರ್ಥಿಕ ಪಟ್ಟಿಗಳ ಪ್ರಸ್ತಾಪವನ್ನು ಅಳೆಯುವುದು ಕೂಡ ಲೆಕ್ಕ ಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ. ನಮ್ಮ ಅಭಿಪ್ರಾಯಕ್ಕೆ, ನಮ್ಮ ಲೆಕ್ಕ ಪರಿಶೋಧನೆ ಸೂಕ್ತ ಆಧಾರ ಒದಗಿಸಿದೆ ಎಂದು ನಾವು ನಂಬಿರುತ್ತೇವೆ.

3. ಕಂಪನಿ ಕಾಯ್ದೆ, 1956ರ ಕಲಮು 227ರ ಉಪಕಲಮು(1ಎ) ಅಡಿಯಲ್ಲಿ, ಭಾರತ ಸರ್ಕಾರ ಹೊರಡಿಸಿರುವ ಕಂಪನಿ (ಲೆಕ್ಕ ಪರಿಶೋಧನಾ ವರದಿ) ಆದೇಶ 2003ರ (ತಿದ್ದುಪಡಿಗೊಂಡ) ಕಂಡಿಕೆ 4 ಮತ್ತು 5ರಲ್ಲಿ ನಮೂದಿಸಿರುವ ವಿಷಯಗಳ ಬಗ್ಗೆ ಹೇಳಿಕೆಯೊಂದನ್ನು ಅನುಬಂಧ ರೂಪದಲ್ಲಿ ಲಗತ್ತಿಸಿರುತ್ತೇವೆ.

4. ಮೇಲ್ಕಂಡ ಪ್ಯಾರಾ 3 ರಲ್ಲಿ ಉಲ್ಲೇಖಿಸಿದ ಅನುಬಂಧದಲ್ಲಿನ ನಮ್ಮ ಟಿಪ್ಪಣಿಗೆ ಮುಂದುವರಿಕೆಯಾಗಿ ಕೆಳಗಿನಂತೆ ವರದಿ ನೀಡುತ್ತೇವೆ.

ಎ. ಲೆಕ್ಕ ಪರಿಶೋಧನೆಯಲ್ಲಿ ನಮಗೆ ತಿಳಿದಂತೆ ಮತ್ತು ನಾವು ನಂಬಿದಂತೆ ಎಲ್ಲಾ ಅವಶ್ಯಕ ಮಾಹಿತಿ ಹಾಗೂ ವಿವರಣೆಗಳನ್ನು ನಿಗಮದಿಂದ ಪಡೆದಿರುತ್ತೇವೆ;

ಬಿ. ನಮ್ಮ ಅಭಿಪ್ರಾಯದ ಪ್ರಕಾರ, ನಾವು ಪರೀಕ್ಷಿಸಿದ ಲೆಕ್ಕ ಪುಸ್ತಕಗಳ ಆಧಾರದ ಮೇಲೆ, ನಿಗಮವು, ತನ್ನ ಲೆಕ್ಕ ಪುಸ್ತಕಗಳನ್ನು ಕಾನೂನಿನಲ್ಲಿ ನಿಗದಿಪಡಿಸಿದಂತೆ ತಯಾರಿಸಿರುತ್ತದೆ;

ಸಿ. ಈ ವರದಿಗೆ ಸಂಬಂಧಿಸಿದ ಆಸ್ತಿ ಹೊಣೆಗಾರಿಕೆ ಪಟ್ಟಿ, ಲಾಭ ಮತ್ತು ನಷ್ಟ ತ:ಖ್ತೆ ಹಾಗೂ ನಗದು ಚಲಾವಣಾಪಟ್ಟಿಗಳು, ನಿಗಮವು ಹೊಂದಿರುವ ಲೆಕ್ಕ ಪುಸ್ತಕಗಳಿಗೆ ಸರಿ ಹೊಂದುತ್ತದೆ;

ಡಿ. ನಮ್ಮ ಅಭಿಪ್ರಾಯದ ಪ್ರಕಾರ, ಈ ವರದಿ ಪರಿಶೋಧಿಸಿದ ನಿಗಮದ ಆಸ್ತಿ ಹೊಣೆಗಾರಿಕೆ ಪಟ್ಟಿ, ಲಾಭ ಮತ್ತು ನಷ್ಟ ತಃಖ್ತೆ ಹಾಗೂ ನಗದು ಚಲಾವಣಾ ಪಟ್ಟಿಗಳು ಕಂಪನಿ ಕಾಯ್ದೆ, 1956ರ 211ನೇ ಕಲಮಿನ ಉಪ ಕಲಮು (3ಸಿ)ನಲ್ಲಿ ಉಲ್ಲೇಖಿಸಿದ ಲೆಕ್ಕ ಪತ್ರ ಪ್ರಮಾಣಗಳ ಅನ್ವಯ ಇರುತ್ತದೆ;

ಇ. ಕಂಪನಿ ವ್ಯವಹಾರಗಳ ಇಲಾಖೆಯು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 829(ಇ) ದಿನಾಂಕ 21.10.2003 ರ ಅನ್ವಯ, ಮಂಡಳಿಯ ನಿರ್ದೇಶಕರುಗಳಿಂದ, ಕಂಪನಿ ಕಾಯ್ದೆ, 1956ರ ಕಲಮು 274(1)(ಜಿ) ಅಡಿಯಲ್ಲಿ ಬಹಿರಂಗಗೊಳಿಕೆಯ (disclosure) ಅಗತ್ಯ ಇರುವುದಿಲ್ಲ;

ಎಫ್.ಕಂಪನಿ ಕಾಯ್ದೆ 1956ರ ಕಲಮು 441(ಎ) ಪ್ರಕಾರ ಸೆಸ್ ಪಾವತಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದೇ ಅಧಿಸೂಚನೆ ನೀಡಿಲ್ಲದಿರುವ ಕಾರಣ ಈ ಬಗ್ಗೆ ಮೊತ್ತವನ್ನು ನಿರ್ಧರಿಸಲಾಗಿಲ್ಲ. ಆದ್ದರಿಂದ ಕಂಪನಿ ಕಾಯ್ದೆ 1956ರ 227 (3)(ಜಿ) ರಂತೆ ಸೆಸ್ ಪಾವತಿಯಾಗದಿರುವ ಅಥವಾ ಪಾವತಿಯಾದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರುವುದಿಲ್ಲ;

ಜಿ. ನಮ್ಮ ಅಭಿಪ್ರಾಯದಂತೆ ಹಾಗೂ ನಮಗೆ ಲಭ್ಯವಿದ್ದ ಮಾಹಿತಿಯಂತೆ ಮತ್ತು ನಮಗೆ ನಿಗಮ ನೀಡಿದ ವಿವರಣೆಯಂತೆ ಗುರುತರ ಲೆಕ್ಕಾಚಾರ ಧೋರಣೆಗಳು ಮತ್ತು ಲೆಕ್ಕದ ಮೇಲಿನ ಟಿಪ್ಪಣಿಗಳ ಜೊತೆಗೆ ಓದಿಕೊಂಡಂತೆ ಈ ಕೆಳಗಿನವುಗಳಿಗೆ ಒಳಪಟ್ಟು:

**1) ಚಿಲ್ಲರೆ ಸಾಲಗಳು, ಸಗಟು ಸನ್ನದುದಾರರಿಂದ ಬರಬೇಕಾದ ಮೊತ್ತ, ಡಿಸ್ಟಿಲರಿಗಳ ಮುಂಗಡದ ಬಾಕಿ ಮೊತ್ತ, ಇಒಆ ಮತ್ತು ರಿಟೇಲರ್ಸ್‌ಗಳ ಮುಂಗಡಗಳು ಇವುಗಳ ಮೊತ್ತಗಳನ್ನು ಖಚಿತ ಪಡಿಸಿಕೊಳ್ಳದಿರುವುದರ ಬಗ್ಗೆ ಅನುಸೂಚಿ 'ಪಿ' ನ ಲೆಕ್ಕಗಳ ಮೇಲಿನ ಟಿಪ್ಪಣಿಗಳು ಟಿಪ್ಪಣಿ ಸಂಖ್ಯೆ ಬಿ(3)**

ಕಂಪನಿ ಕಾಯ್ದೆ 1956ರ ಪ್ರಕಾರ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕ ಪ್ರಮಾಣಗಳಿಗೆ ಅನುಗುಣವಾಗಿ, ಸದರಿ ಲೆಕ್ಕಪತ್ರಗಳು ನೈಜ ಮತ್ತು ಒಪ್ಪಬಹುದಾದ ಚಿತ್ರಣವನ್ನು ಒದಗಿಸುತ್ತವೆ ಎಂದು ತಿಳಿಸುತ್ತೇವೆ:

(1) 31.3.2010ರಲ್ಲಿದ್ದಂತೆ ನಿಗಮ ವ್ಯವಹಾರಗಳ ವಸ್ತುಸ್ಥಿತಿಯನ್ನು ತೋರಿಸುವ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ;

(2) ಅದೇ ದಿನಾಂಕದಂದು ಕೊನೆಗೊಂಡ ವರ್ಷದ ಲಾಭ ತೋರಿಸುವ ಲಾಭ ಮತ್ತು ನಷ್ಟ ತಃಖ್ತೆ,

ಮತ್ತು;

(3) ಅದೇ ದಿನಾಂಕದಂದು ಕೊನೆಗೊಂಡ ವರ್ಷದ ನಗದು ಚಲಾವಣೆಯನ್ನು ತೋರಿಸುವ ನಗದು ಚಲಾವಣಾ ಪಟ್ಟಿ.

**ವಿ.ಕೆ. ನಿರಂಜನ ಮತ್ತು ಕಂಪನಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**

ಪಾಲುದಾರರು
**ವಿಜಯನ್ ಗೋವಿಂದನ್**
ಸದಸ್ಯತ್ವ ಸಂಖ್ಯೆ 036348
ರಿ. ನಂ. 002468ಎಸ್

ಸ್ಥಳ: ಬೆಂಗಳೂರು
ದಿನಾಂಕ: 01.07.2010

## ಲೆಕ್ಕಪರಿಶೋಧಕರ ವರದಿಯ ಅನುಬಂಧ

ಇದೇ ದಿನಾಂಕದ ನಮ್ಮ ವರದಿಯ ಪ್ಯಾರಾ 3 ರಲ್ಲಿ ಉಲ್ಲೇಖಿಸಿದೆ

**1. ಸ್ಥಿರಾಸ್ತಿಗೆ ಸಂಬಂಧಿಸಿದಂತೆ**

ಎ) ಸ್ಥಿರಾಸ್ತಿಯ ಪರಿಮಾಣ ಹಾಗೂ ಸ್ಥಾಪನಾ ವಿವರಗಳನ್ನೊಳಗೊಂಡಂತೆ ನಿಗಮದ ಸ್ಥಿರಾಸ್ತಿಯ ಸರಿಯಾದ ದಾಖಲೆಯನ್ನು ಕಾಪಾಡಿಕೊಂಡು ಬಂದಿರುತ್ತದೆ.

ಬಿ) ಈ ಸ್ಥಿರಾಸ್ತಿಗಳನ್ನು ಆಡಳಿತ ವ್ಯವಸ್ಥೆಯು ವರ್ಷಾಂತ್ಯದಲ್ಲಿ ಭೌತಿಕವಾಗಿ ತಪಾಸಣೆ ಮಾಡಿದೆ. ನಿಗಮದ ಗಾತ್ರ ಮತ್ತು ಸ್ಥಿರಾಸ್ತಿಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡರೆ, ಹೀಗೆ ಮಾಡಿರುವುದು ನಮ್ಮ ಅಭಿಪ್ರಾಯದಲ್ಲಿ ಸರಿಯಾಗಿದೆ. ಸದರಿ ತಪಾಸಣೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ.

ಸಿ) ನಮ್ಮ ಅಭಿಪ್ರಾಯದ ಪ್ರಕಾರ ನಿಗಮವು ಪ್ರಸ್ತುತ ವರ್ಷದಲ್ಲಿ ಯಾವುದೇ ಸ್ಥಿರಾಸ್ತಿಯ ಗಣನೀಯ ಭಾಗವನ್ನು ವಿಲೇವಾರಿ ಮಾಡಿರುವುದಿಲ್ಲ, ಮತ್ತು ಚಾಲ್ತಿಯಲ್ಲಿರುವ ನಿಗಮದ ಸ್ವರೂಪಕ್ಕೆ (going concern status) ಧಕ್ಕೆ ಬಂದಿರುವುದಿಲ್ಲ.

**2. ದಾಸ್ತಾನಿಗೆ ಸಂಬಂಧಿಸಿದಂತೆ**

ಎ) ದಾಸ್ತಾನಿನ ಭೌತಿಕ ತಪಾಸಣೆಯನ್ನು ನಿಗಮವು ಈ ವರ್ಷದಲ್ಲಿ ಮಾಡಿರುತ್ತದೆ. ಇಂಥ ತಪಾಸಣೆಗಳ ನಡುವಣ ಅಂತರ ನಮ್ಮ ಅಭಿಪ್ರಾಯದಲ್ಲಿ ಸೂಕ್ತವಾಗಿದೆ.

ಬಿ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ, ನಿಗಮವು ಅನುಸರಿಸಿರುವ ದಾಸ್ತಾನಿನ ಭೌತಿಕ ತಪಾಸಣೆಯ ವಿಧಾನವು ನಿಗಮದ ವಹಿವಾಟಿನ ಪರಿಮಾಣ ಹಾಗೂ ವಹಿವಾಟಿನ ಸ್ವರೂಪಕ್ಕನುಗುಣವಾಗಿ ಸೂಕ್ತವಾಗಿದೆ ಎಂಬುದು ನಮ್ಮ ಅಭಿಪ್ರಾಯ.

ಸಿ) ನಿಗಮವು, ದಾಸ್ತಾನಿನ ಸರಿಯಾದ ದಾಖಲೆಯನ್ನು ಹೊಂದಿದೆ. ನಮಗೆ ನೀಡಿದ ವಿವರಣೆಯಂತೆ ದಾಸ್ತಾನಿನ ಭೌತಿಕ ತಪಾಸಣೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ.

3. ಕಂಪನಿ ಕಾಯ್ದೆಯ ಕಲಮು 301 ರ ಪ್ರಕಾರ ಇಟ್ಟಿರುವ ರಿಜಿಸ್ಟರ್ ಅಡಿಯಲ್ಲಿ ಬರುವ ಕಂಪನಿ, ಫರ್ಮ್ ಅಥವಾ ಇತರರಿಗೆ ಆಧಾರಸಹಿತ / ಆಧಾರರಹಿತ ಸಾಲವನ್ನು ನೀಡಿರುವ ಅಥವಾ ಅಂತಹವರಿಂದ ಅಂತಹ ಸಾಲವನ್ನು ಪಡೆದಿರುವ ಬಗ್ಗೆ:

ಎ) ಕಂಪನಿ ಕಾಯ್ದೆಯ ಕಲಮು 301 ರ ಪ್ರಕಾರ ಇಟ್ಟಿರುವ ರಿಜಿಸ್ಟರ್ ಅಡಿಯಲ್ಲಿ ಬರುವ ಕಂಪನಿ, ಫರ್ಮ್ ಅಥವಾ ಇತರ ಯಾರಿಗೂ ಆಧಾರಸಹಿತ / ಆಧಾರರಹಿತ ಸಾಲವನ್ನು ನಿಗಮವು ನೀಡಿರುವುದಿಲ್ಲ. ಆದ್ದರಿಂದ ಆದೇಶದ ಪ್ಯಾರಾ 4(iii)(ಬಿ) ಯಿಂದ (ಡಿ) ವರೆಗಿನ ಅಂಶಗಳು ಅನ್ವಯಿಸುವುದಿಲ್ಲ.

ಬಿ) ಕಂಪನಿ ಕಾಯ್ದೆಯ ಕಲಮು 301 ರ ಪ್ರಕಾರ ಇಟ್ಟಿರುವ ರಿಜಿಸ್ಟರ್ ಅಡಿಯಲ್ಲಿ ಬರುವ ಕಂಪನಿ, ಫರ್ಮ ಅಥವಾ ಇತರ ಯಾರಿಂದಲೂ ನಿಗಮವು ಆಧಾರಸಹಿತ / ಆಧಾರರಹಿತ ಸಾಲವನ್ನು ಪಡೆದಿರುವುದಿಲ್ಲ. ಆದ್ದರಿಂದ ಆದೇಶದ ಪ್ಯಾರಾ 4(iii)(ಎಫ್) ಯಿಂದ (ಜಿ) ವರೆಗಿನ ಅಂಶಗಳು ಅನ್ವಯಿಸುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಹಾಗೂ ವಿವರಣೆಯಂತೆ ನಿಗಮದ ವಹಿವಾಟಿನ ಗಾತ್ರ ಮತ್ತು ಸ್ವರೂಪಕ್ಕೆ ತಕ್ಕಂತೆ ದಾಸ್ತಾನು ಮತ್ತು ಸ್ಥಿರ ಆಸ್ತಿ ಖರೀದಿ ಹಾಗೂ ಸರಕು ಮತ್ತು ಸೇವೆಗಳ ಮಾರಾಟ, ಇವುಗಳ ಮೇಲೆ ನಿಗಮ ಸಾಕಷ್ಟು ಆಂತರಿಕ ಹತೋಟಿಯನ್ನು ಹೊಂದಿರುತ್ತದೆ. ಆಂತರಿಕ ಹತೋಟಿಯಲ್ಲಿನ ಮುಖ್ಯ ದೌರ್ಬಲ್ಯಗಳನ್ನು ಸರಿಪಡಿಸುವಲ್ಲಿ, ಸತತವಾಗಿ ವಿಫಲವಾಗಿರುವ ಯಾವುದೇ ಅಂಶ ನಮ್ಮ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಗೋಚರಿಸಿರುವುದಿಲ್ಲ.

5. ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ, ಕಂಪನಿ ಕಾಯ್ದೆ 1956ರ 301ನೇ ಕಲಮಿನ ಅಡಿಯಲ್ಲಿ ಸಂಬಂಧಿತ ರಿಜಿಸ್ಟರಿನಲ್ಲಿ ಉಲ್ಲೇಖಿಸಬೇಕಾದ ಯಾವುದೇ ವಹಿವಾಟು ಇರುವುದಿಲ್ಲ. ಆದ್ದರಿಂದ ಆದೇಶದ ಪ್ಯಾರಾ 4(v)(ಬಿ) ನಿಗಮಕ್ಕೆ ಅನ್ವಯಿಸುವುದಿಲ್ಲ.

6. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ ನಿಗಮ, ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನು ಪಡೆದಿರದ ಕಾರಣ, ಆದೇಶದ ಪ್ಯಾರಾ 4(vi) ಅನ್ವಯವಾಗುವುದಿಲ್ಲ.

7. ನಿಗಮದ ವಹಿವಾಟಿನ ಗಾತ್ರ ಮತ್ತು ಸ್ವರೂಪಕ್ಕೆ ತಕ್ಕಂತೆ ನಿಗಮವು ಅಂತರಿಕ ಪರಿಶೋಧನಾ ಪದ್ಧತಿಯನ್ನು ಹೊಂದಿರುತ್ತದೆ. ಅದಾಗ್ಯೂ ಆಂತರಿಕ ಲೆಕ್ಕಪರಿಶೋಧನೆಯ ವ್ಯಾಪ್ತಿಯನ್ನು ಹೆಚ್ಚಿಸಿ ಸಶಕ್ತಗೊಳಿಸುವ ಅವಶ್ಯಕತೆ ಇರುತ್ತದೆ.

8. ಕಂಪನಿ ಕಾಯ್ದೆ, 1956 ರ ಕಲಮು 209(1)(ಡಿ)ಯ ಪ್ರಕಾರ, ನಿಗಮವು ಉತ್ಪಾದನಾ ವೆಚ್ಚದ ದಾಖಲೆ ಇಡುವುದನ್ನು ಕೇಂದ್ರ ಸರ್ಕಾರ ನಿಗದಿಪಡಿಸಿರುವುದಿಲ್ಲ.

**9. ಶಾಸನ ಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ**

ಎ) ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆ ಪ್ರಕಾರ ಮತ್ತು ನಾವು ಪರೀಕ್ಷಿಸಿದ ಲೆಕ್ಕ ಪತ್ರಗಳ ಪ್ರಕಾರ, ನಿಗಮವು, ರಾಜ್ಯ ಸರ್ಕಾರದ ಇತರೆ ಸಂಸ್ಥೆಗಳಿಂದ ಎರವಲು ಸೇವೆಯ ಮೇಲೆ ಪಡೆದ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ವಿಷಯದಲ್ಲಿ ಪಾವತಿಸಬೇಕಾದ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಮಾತೃ ಸಂಸ್ಥೆಗಳಿಗೆ ನೀಡಿರುತ್ತದೆ. ಅಲ್ಲದೆ, ವರಮಾನ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ಅಬಕಾರಿ ಶುಲ್ಕ, ಸೀಮಾ ಸುಂಕ ಹಾಗೂ ಸೆಸ್‌ಗಳಂತಹ ತಕರಾರಿಲ್ಲದ ಪಾವತಿಸಬೇಕಾದ ಶಾಸನಬದ್ಧ ಪಾವತಿಗಳನ್ನು, ಸಾಮಾನ್ಯವಾಗಿ ನಿಗಮ, ಕ್ರಮವರಿತು ಪಾವತಿಸುತ್ತಾ ಬಂದಿರುತ್ತದೆ. ನಮಗೆ ಒದಗಿಸಿದ ಮಾಹಿತಿ ಹಾಗೂ ವಿವರಣೆ ಪ್ರಕಾರ, ನಿಗಮ 31.3.2010 ರಂದು, ಪಾವತಿ ಮಾಡಬೇಕಾದ ದಿನದಿಂದ ಆರು ತಿಂಗಳಿಗೆ ಮೀರಿದ ಮೇಲ್ಕಂಡ ಶಾಸನಬದ್ಧ ತಕರಾರಿಲ್ಲದ ಬಾಕಿಗಳನ್ನು ಪಾವತಿಮಾಡದೇ ಇಟ್ಟುಕೊಂಡಿರುವುದಿಲ್ಲ. ಮುಂದುವರೆದಂತೆ, ಕಂಪನಿ ಕಾಯ್ದೆ 1956 ರ ಕಲಮು 441 (ಎ)ಅಡಿಯಲ್ಲಿ, ನೀಡಬೇಕಾದ ಸೆಸ್‌ನ್ನು, ಕೇಂದ್ರ ಸರ್ಕಾರವು ಈ ವರೆಗೆ ನಿಗದಿಮಾಡಿಲ್ಲವಾದ್ದರಿಂದ, ಅದನ್ನು ನಿಯಮಿತವಾಗಿ ಪಾವತಿ ಮಾಡಲಾಗಿದೆಯೇ, ಇಲ್ಲವೇ ಎಂಬ ಬಗ್ಗೆ ಟಿಪ್ಪಣಿ ಮಾಡಲು ನಮಗೆ ಸಾಧ್ಯವಾಗಿಲ್ಲ.

ಬಿ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ, ತಕರಾರಿರುವ ಕಾರಣ, ಸಂಬಂಧಪಟ್ಟ ನಿರ್ದಿಷ್ಟ ಪ್ರಾಧಿಕಾರದ ಪರಿಶೀಲನೆಯಲ್ಲಿ ಈ ಕೆಳಗಿನ ಮೊತ್ತಗಳು ಇದ್ದು, ನಿಗಮವು ಆ ಕಾರಣ ಅವುಗಳನ್ನು ಪಾವತಿ ಮಾಡಿಲ್ಲ:

| ಕ್ರ. ಸಂ. | ಕಾಯ್ದೆಯ ಹೆಸರು | ಬಾಕಿಯ ಸ್ವರೂಪ | ಮೊತ್ತ (₹ ಲಕ್ಷಗಳಲ್ಲಿ) | ಮೊತ್ತಕ್ಕೆ ಸಂಬಂಧಿಸಿದ ಅವಧಿ | ಇತ್ಯರ್ಥವಾಗದೆ ಉಳಿದಿರುವ ವೇದಿಕೆ |
|---|---|---|---|---|---|
| 1 | ಆರ್ಥಿಕ ಕಾಯ್ದೆ | ಸೇವಾ ತೆರಿಗೆ | 165.48 | 2006-07 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು. |
| 2 | ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ | ಮಾರಾಟ ತೆರಿಗೆ | 18.44 | 2003–04 ರಿಂದ 2005–06 | ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಇಂಟಲಿಜೆನ್ಸ್) |
| 3 | ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ | ಮಾರಾಟ ತೆರಿಗೆ | 240.53 | 2003-04 | ವಾಣಿಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು |
| 4 | ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ | ಮಾರಾಟ ತೆರಿಗೆ | 561.80 | 2004-05 | ವಾಣಿಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು |
| 5 | ಆರ್ಥಿಕ ಕಾಯ್ದೆ | ಸೇವಾ ತೆರಿಗೆ | 1132.53 | 2003–04 ರಿಂದ 2005–06 | ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಸೆಂಟ್ರಲ್ ಎಕ್ಸೈಜ್ ಇಂಟಲಿಜೆನ್ಸ್ |
| 6 | ಆರ್ಥಿಕ ಕಾಯ್ದೆ | ಸೇವಾ ತೆರಿಗೆ | 4125.03 | 04/2006 ರಿಂದ 09/2007 | ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಸೆಂಟ್ರಲ್ ಎಕ್ಸೈಜ್ ಇಂಟಲಿಜೆನ್ಸ್ |
| 7 | ಆರ್ಥಿಕ ಕಾಯ್ದೆ | ಸೇವಾ ತೆರಿಗೆ | 324.89 | 10/2007 ರಿಂದ 09/2008 | ಸೇವಾ ತೆರಿಗೆ ಆಯುಕ್ತರು |
| 8 | ಆರ್ಥಿಕ ಕಾಯ್ದೆ | ಸೇವಾ ತೆರಿಗೆ | 2847.02 | 10/2008 ರಿಂದ 09/2009 | ಸೇವಾ ತೆರಿಗೆ ಆಯುಕ್ತರು |
| 9 | ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ | ಮಾರಾಟ ತೆರಿಗೆ | 135.13 | 2007-2006 | ವಾಣಿಜ್ಯ ತೆರಿಗೆ ಉಪ ಆಯುಕ್ತರು (ಇ) 5 ಬೆಂಗಳೂರು |

10. ಆರ್ಥಿಕ ವರ್ಷಗಳ ವರ್ಷಾಂತ್ಯಗಳಲ್ಲಿ ನಿಗಮವು ಸಂಚಿತ ನಷ್ಟ ಅನುಭವಿಸಿಲ್ಲ. ನಾವು ಪರಿಶೋಧನೆ ಮಾಡಿದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಮತ್ತು ಹಿಂದಿನ ವರ್ಷದಲ್ಲಿ ನಿಗಮ, ಯಾವುದೇ ನಗದು ನಷ್ಟವನ್ನು ಅನುಭವಿಸಿರುವುದಿಲ್ಲ.

11. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ, ನಮ್ಮ ಅಭಿಪ್ರಾಯದಲ್ಲಿ ಯಾವುದೇ ಹಣಕಾಸು ಸಂಸ್ಥೆ, ಬ್ಯಾಂಕ್ ಹಾಗೂ ಡಿಬೆಂಚರ್ ಹೊಲ್ಡರ್‌ಗಳಿಗೆ ನೀಡಬೇಕಾದ ಬಾಕಿಯನ್ನು ಮರುಪಾವತಿ ಮಾಡದಿರುವ ನಿದರ್ಶನಗಳಿರುವುದಿಲ್ಲ.

12. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ ಮತ್ತು ಲಭ್ಯ ಮಾಹಿತಿಯಂತೆ, ನಮ್ಮ ಅಭಿಪ್ರಾಯದಲ್ಲಿ ನಿಗಮವು ಷೇರುಗಳು, ಸಾಲ ಪತ್ರಗಳು ಹಾಗೂ ಇತರೆ ಭದ್ರತೆಗಳ ಆಧಾರದ ಮೇಲೆ ಯಾವುದೇ ಸಾಲ ಅಥವಾ ಮುಂಗಡವನ್ನು ಮಂಜೂರು ಮಾಡಿರುವುದಿಲ್ಲ.

13. ನಮ್ಮ ಅಭಿಪ್ರಾಯದಲ್ಲಿ ನಿಗಮ ಚಿಟ್ ಫಂಡ್ / ನಿಧಿ / ಮ್ಯೂಚುಯಲ್ ಫಂಡ್ ಸಂಘ ಆಗಿರುವುದಿಲ್ಲ. ಆದ್ದರಿಂದ ಆದೇಶದ ಪ್ಯಾರಾ 4(viii) ರ ಉಪಬಂಧಗಳು ನಿಗಮಕ್ಕೆ ಅನ್ವಯಿಸುವುದಿಲ್ಲ.

14. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ, ನಿಗಮ, ಯಾವುದೇ ಷೇರುಗಳು, ಭದ್ರತೆಗಳು, ಡಿಬೆಂಚರುಗಳು ಮತ್ತು ಇತರ ಹೂಡಿಕೆಯ ವ್ಯವಹಾರ ನಡೆಸುತ್ತಿರುವುದಿಲ್ಲ. ಆದರೆ ನಿಗಮವು 'ಮ್ಯೂಚುಯಲ್ ಫಂಡ್'ನಲ್ಲಿ ಹೂಡಿದ ಹೂಡಿಕೆಯನ್ನು ತನ್ನ ಹೆಸರಿನಲ್ಲೇ ಹೊಂದಿದೆ.

15. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ, ನಿಗಮ ಯಾವುದೇ ಬ್ಯಾಂಕು ಅಥವಾ ಆರ್ಥಿಕ ಸಂಸ್ಥೆಯಿಂದ ಇತರರು ಪಡೆದ ಸಾಲಗಳಿಗೆ ಜಾಮೀನು ನೀಡಿರುವುದಿಲ್ಲ.

16. ಪರಿಶೋಧನೆಗೆ ಒಳಪಟ್ಟ ಅವಧಿಯಲ್ಲಿ, ನಿಗಮ ಯಾವುದೇ ಅವಧಿ ಸಾಲವನ್ನು ಪಡೆದಿರುವುದಿಲ್ಲ.

17. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯಂತೆ ಮತ್ತು ಒಟ್ಟಾರೆಯಾಗಿ ನಾವು ಪರೀಕ್ಷಿಸಿದ ಆಸ್ತಿ ಹೊಣೆಗಾರಿಕೆ ಪಟ್ಟಿ ಹಾಗೂ ನಗದು ಚಲಾವಣಾ ವರದಿ ಇವುಗಳ ಪ್ರಕಾರ, ಸಂಸ್ಥೆ ಪಡೆದ ಅಲ್ಪಾವಧಿ ನಿಧಿಯನ್ನು, ಮೇಲ್ನೋಟಕ್ಕೆ ಕಾಣುವಂತೆ ದೀರ್ಘಾವಧಿ ಹೂಡಿಕೆ ಮಾಡಿರುವುದಿಲ್ಲ.

18. ಕಂಪನಿ ಕಾಯ್ದೆಯ ಕಲಮು 301 ರ ಪ್ರಕಾರ ಇಟ್ಟಿರುವ ರಿಜಿಸ್ಟರಿನ ಅಡಿಯಲ್ಲಿ ಬರುವ ಕಂಪನಿ ಅಥವಾ ಇತರರಿಗೆ ನಿಗಮವು ಯಾವುದೇ ಪ್ರಾಶಸ್ತ್ಯ ಷೇರನ್ನು ಹಂಚಿರುವುದಿಲ್ಲ.

19. ನಿಗಮ, ಡಿಬೆಂಚರುಗಳನ್ನು ನೀಡಿರುವುದಿಲ್ಲ. ಆದ್ದರಿಂದ ಯಾವುದೇ ಭದ್ರತೆ ಅಥವಾ ಚಾರ್ಜ್‌ಗಳು ಸೃಷ್ಟಿಯಾಗಿರುವುದಿಲ್ಲ.

20. ನಿಗಮವು ಪ್ರಸ್ತುತ ವರ್ಷದಲ್ಲಿ ಯಾವುದೇ ಸಾರ್ವಜನಿಕ ಹೂಡಿಕೆ ಮೂಲಕ ಹಣ ಸಂಗ್ರಹಣೆಯನ್ನು ಕೈಗೊಂಡಿರುವುದಿಲ್ಲ.

21. ನಿಗಮವು ನಮಗಿತ್ತ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ನಮ್ಮ ಅಭಿಪ್ರಾಯದಲ್ಲಿ, ನಿಗಮದಿಂದಾಗಲೀ ಅಥವಾ ನಿಗಮಕ್ಕಾಗಲೀ ಪ್ರಸ್ತುತ ವರ್ಷದಲ್ಲಿ ಯಾವುದೇ ವಂಚನೆ ಉಂಟಾಗಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ.

**ವಿ.ಕೆ. ನಿರಂಜನ ಮತ್ತು ಕಂಪನಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**

ಪಾಲುದಾರರು
**ವಿಜಯನ್ ಗೋವಿಂದನ್**
ಸದಸ್ಯತ್ವ ಸಂಖ್ಯೆ 036348
ರಿ. ನಂ. 002468ಎಸ್

ಸ್ಥಳ: ಬೆಂಗಳೂರು

ದಿನಾಂಕ: 01.07.2010

# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

## ಅಂಕಿ ಅಂಶಗಳ ನೋಟ

(ಕೋಟಿ ₹ ಗಳಲ್ಲಿ)

| ಕ್ರ. ಸಂ. | ವಿವರ | 2003-04 | 2004-05 | 2005-06 | 2006-07 | 2007-08 | 2008-09 | 2009-10 |
|---|---|---|---|---|---|---|---|---|
| 1 | ಮಾರಾಟದ ವಹಿವಾಟು ಹಾಗು ಇತರ ಆದಾಯ | 1311 | 2238 | 2986 | 3618 | 6410 | 8267 | 9691.05 |
| 2 | ತೆರಿಗೆಗೆ ಮುನ್ನಿನ ಲಾಭ | 0.41 | 6.61 | 6.61 | 5.31 | 30.86 | 17.57 | 8.57 |
| 3 | ತೆರಿಗೆಯ ನಂತರದ ಲಾಭ | 0.27 | 4.12 | 3.77 | 2.97 | 20.00 | 16.05 | 7.74 |
| 4 | ಮೀಸಲು ಮತ್ತು ಹೆಚ್ಚುವರಿ | 0.26 | 4.40 | 8.20 | 10.68 | 28.35 | 42.06 | 47.46 |
| 5 | ಷೇರು ಬಂಡವಾಳ | 2.00 | 2.00 | 2.00 | 2.00 | 2.00 | 2.00 | 2.00* |
| 6 | ನಿವ್ವಳ ಮೌಲ್ಯ | 2.26 | 6.40 | 10.20 | 12.68 | 30.35 | 44.06 | 49.46* |
| 7 | ಹೂಡಿಕೆಗಳು | – | – | – | – | 20.00 | 57.00 | 10.00 |
| 8 | ಪ್ರಿವಿಲೇಜ್ ಶುಲ್ಕ | 22.50 | 32.00 | 41.00 | 165.50 | 345.38 | 479.64 | 570.14 |
| 9 | ಸಂಗ್ರಹಿಸಲಾದ ಸುಂಕ | 379.00 | 1220.00 | 1512.00 | 1953.98 | 3478.70 | 4883.17 | 5881.30 |
| 10 | ಲಾಭಾಂಶ | – | – | – | 20 | 100 | 100 | 100 |
| 11 | ಒಟ್ಟು ಸಿಬ್ಬಂದಿಯ ಸಂಖ್ಯೆ | 160 | 234 | 263 | 294 | 426 | 472 | 475 |
| 12 | ಪ್ರತಿ ಸಿಬ್ಬಂದಿಯ ವಾರ್ಷಿಕ ಸರಾಸರಿ ಮಾರಾಟ | 8.17 | 9.56 | 11.35 | 12.31 | 14.98 | 17.43 | 20.32 |
| 13 | ಪ್ರತಿ ಷೇರಿನ ಪುಸ್ತಕ ಮೌಲ್ಯ (ಮುಖ ಬೆಲೆ ₹ 1,000/–) | 1130.00 | 3200.00 | 5100.00 | 6340.00 | 15000.00 | 22030.00 | 24729.00 |
| 14 | ಪ್ರತಿ ಷೇರಿನ ಗಳಿಕೆ(ರೂ.ಗಳಲ್ಲಿ) (ಮುಖ ಬೆಲೆ ₹ 1,000/–) | 133.00 | 2302.00 | 1887.00 | 1487.00 | 10002.00 | 8027.00 | 3870.00 |
| 15 | ನಿವ್ವಳ ಆಸ್ತಿ | 1.38 | 2.00 | 10.00 | 24.00 | 25.00 | 25.89 | 25.52 |
| 16 | ವಹಿವಾಟದ ಮೇಲೆ ಶೇಕಡಾವಾರು ವೆಚ್ಚ | | | | | | | |
| | (a) ಆಡಳಿತ ಮತ್ತು ಸಾಮಾನ್ಯ ವೆಚ್ಚ (%) | 0.56 | 0.54 | 0.45 | 0.57 | 0.52 | 0.46 | 0.47 |
| | (b) ಆರ್ಥಿಕ ವೆಚ್ಚ (%) | 0.02 | 0.04 | 0.04 | 0.04 | 0.05 | 0.03 | 0.006 |

* ಕರ್ನಾಟಕ ಸರ್ಕಾರದಿಂದ ಪಡೆದ ಷೇರು ಅರ್ಜಿಯ ಹಣ ₹ 10.00 ಕೋಟಿಗಳನ್ನು ಹೊರತುಪಡಿಸಿ.

# ವಾರ್ಷಿಕ ಲೆಕ್ಕ ಪತ್ರ
# 2009–10

# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

## 31ನೇ ಮಾರ್ಚ್ 2010ರಂದಿನ ಸ್ಥಿತಿ ವಿವರಣಾ ಪಟ್ಟಿ

ಲಕ್ಷ ₹ ಗಳಲ್ಲಿ

| ವಿವರಗಳು | ಅನುಸೂಚಿ ಸಂಖೆ | 31 ಮಾರ್ಚ್ 2010ರಲ್ಲಿದ್ದಂತೆ | | 31 ಮಾರ್ಚ್ 2009ರಲ್ಲಿದ್ದಂತೆ | |
|---|---|---|---|---|---|
| **ನಿಧಿ ಮೂಲಗಳು** | | | | | |
| **ಷೇರುದಾರರ ನಿಧಿ** | | | | | |
| ಎ) ಬಂಡವಾಳ | ಎ | 200.00 | | 200.00 | |
| ಬಿ) ಮೀಸಲು ಮತ್ತು ಹೆಚ್ಚುವರಿ | ಬಿ | 4745.73 | **4945.73** | 4205.81 | **4405.81** |
| **ಸಾಲ ನಿಧಿ** | | | | | |
| ಎ) ಆಧಾರ ಸಹಿತ ಸಾಲಗಳು | ಸಿ | 0.00 | | 7895.92 | |
| ಬಿ) ನಿರಾಧಾರ ಸಾಲಗಳು | ಡಿ | 253.19 | **253.19** | 253.19 | **8149.11** |
| ಷೇರು ಅರ್ಜಿ ಹಣ – ಹಂಚಿಕೆ ಆಗದೆ ಉಳಿದಿರುವ | ಐ | | 1000.00 | | |
| **ಮುಂದೂಡಿದ ತೆರಿಗೆ ಹೊಣೆ** | | | 34.35 | | 40.13 |
| **ಒಟ್ಟು** | | | **6233.27** | | **12595.05** |
| **ನಿಧಿಗಳ ವಿನಿಯೋಗ** | | | | | |
| **ಸ್ಥಿರಾಸ್ತಿ** | | | | | |
| ಎ) ಒಟ್ಟು ಆಸ್ತಿ | ಇ | 3073.30 | | 3037.13 | |
| ಬಿ) ಕಳೆ : ಸವಕಳಿ | ಇ | 521.44 | | 448.18 | |
| ಸಿ) ನಿವ್ವಳ ಆಸ್ತಿ | | 2551.86 | | 2588.95 | |
| ಪ್ರಗತಿಯಲ್ಲಿರುವ ಕಾಮಗಾರಿ | ಇ | | | 0.36 | |
| | | | **2551.86** | | **2589.31** |
| **ಹೂಡಿಕೆಗಳು (ಮುಖ ಬೆಲೆ)** | | | | | |
| ಮ್ಯೂಚ್ಯುಯಲ್ ಫಂಡ್‌ನಲ್ಲಿ (ನಾನ್ ಟ್ರೇಡ್/ ನಾನ್ ಕೋಟೆಡ್) | ಎಫ್ | | 1000.00 | | 5700.00 |
| **ಚಾಲ್ತಿ ಆಸ್ತಿ, ಸಾಲ ಹಾಗೂ ಮುಂಗಡಗಳು** | | | | | |
| ಎ) ಸಾಲಗಾರರು | ಜಿ | 1454.52 | | 1922.86 | |
| ಬಿ) ನಗದು ಮತ್ತು ಬ್ಯಾಂಕಿನಲ್ಲಿರುವ ಶಿಲ್ಕು | ಜಿ | 14161.91 | | 18797.54 | |
| ಸಿ) ಸಾಲ ಮತ್ತು ಮುಂಗಡಗಳು | ಹೆಚ್ | 5150.35 | | 6960.00 | |
| **ಒಟ್ಟು** | | **20766.78** | | **27680.40** | |

| | | | | | |
|---|---|---|---|---|---|
| **ಕಳೆ :** | | | | | |
| **ಪ್ರಸ್ತುತ ಹೊಣೆಗಾರಿಕೆ ಮತ್ತು ಹವಣಿಕೆಗಳು** | | | | | |
| ಎ) ಪ್ರಸ್ತುತ ಹೊಣೆಗಾರಿಕೆಗಳು | ಜೆ | 16450.24 | | 21828.16 | |
| ಬಿ) ಹವಣಿಕೆಗಳು | ಜೆ | 1635.13 | | 1546.50 | |
| | | **18085.37** | | **23374.66** | |
| **ನಿವ್ವಳ ಚಾಲ್ತಿ ಆಸ್ತಿ** | | | **2681.41** | | **4305.74** |
| **ಒಟ್ಟು** | | | **6233.27** | | **12595.05** |
| ಗುರುತರ ಲೆಕ್ಕಾಚಾರ ಧೋರಣೆಗಳು ಮತ್ತು ಲೆಕ್ಕದ ಮೇಲಿನ ಟಿಪ್ಪಣಿಗಳು | ಪಿ | | | | |

**ನಮ್ಮ ಸದರಿ ದಿನಾಂಕದ ವರದಿಯಂತೆ**

**ನಿರ್ದೇಶಕ ಮಂಡಳಿಯ ಪರವಾಗಿ**

**ವಿ.ಕೆ. ನಿರಂಜನ್ ಮತ್ತು ಕಂಪನಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ

**ಡಾ. ಎಚ್. ಶಶಿಧರ್**
ವ್ಯವಸ್ಥಾಪಕ ನಿರ್ದೇಶಕರು

**ಎಲ್.ವಿ. ನಾಗರಾಜನ್**
ಅಧ್ಯಕ್ಷರು

**ವಿಜಯನ್ ಜಿ.**
ಪಾಲುದಾರರು
ಸದಸ್ಯತ್ವದ ಸಂಖ್ಯೆ: 036348
ರಿ. ನಂ. 002468ಎಸ್

**ಸಿ. ವೀರಭದ್ರಯ್ಯ**
ಕಾರ್ಯಕಾರಿ ನಿರ್ದೇಶಕರು (ಹಣಕಾಸು)

**ಬಿ.ಬಿ. ಬಿರಾದರ್**
ಕಂಪನಿ ಕಾರ್ಯದರ್ಶಿ ಮತ್ತು
ಪ್ರಧಾನ ವ್ಯವಸ್ಥಾಪಕರು (ಹಣಕಾಸು)

ದಿನಾಂಕ : 01.07.2010
ಸ್ಥಳ : ಬೆಂಗಳೂರು

